# ಜುಲೈ ವರದಿ - ೨೦೧೪

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011

**ಒಟ್ಟು ಅರ್ಜಿಗಳ ಸ್ವೀಕೃತಿ - 5.45 ಕೋಟಿ**

**ಒಟ್ಟು ಅರ್ಜಿಗಳ ವಿಲೇವಾರಿ - 5.36 ಕೋಟಿ**



ಫ್ರೆಂಚ್ ವಿದ್ಯಾರ್ಥಿಗಳನ್ನು ಸಕಾಲ ಮಿಷನ್‌ನಲ್ಲಿ ಅಧ್ಯಯನಕ್ಕೆ ಕಳುಹಿಸುವ ಪ್ರಸ್ತಾವನೆಯೊಂದಿಗೆ ಸನ್ಮಾನ್ಯ ಕಾನೂನು ಮಂತ್ರಿಗಳ ಜೊತೆ ಚರ್ಚಾನಿರತರಾಗಿರುವ ಫ್ರೆಂಚ್ ದೇಶದ ಕಾನ್ಸುಲ್ ಜನರಲ್.

**ಇಂದು... ನಾಳೆ... ಇನ್ನಿಲ್ಲ, ಹೇಳಿದ ದಿನ ತಪ್ಪೊಲ್ಲ**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)

ಕರೆ ಕೇಂದ್ರ : 080 - 4455 4455, ವೆಬ್‌ಸೈಟ್ : www.sakala.kar.nic.in ಇ-ಮೇಲ್ : sakala@nic.in



ಶ್ರೀ ಸಿದ್ದರಾಮಯ್ಯ
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

# ಸಂದೇಶ

ಜುಲೈ ತಿಂಗಳನಾದ್ಯಂತ ವಿಧಾನ ಸಭಾ ಅಧಿವೇಶನವನ್ನು ಜರುಗಿಸಿದೆವು. ವಿಧಾನಮಂಡಲದ ಉಭಯ ಸದನಗಳೂ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ತಿದ್ದುಪಡಿ ಮಸೂದೆಯನ್ನು ಸರ್ವಾನುಮತದಿಂದ ಅನುಮೋದಿಸಿವೆ. ಸೇವೆಗಳ ಆನ್‌ಲೈನ್ ಸ್ವೀಕೃತಿ ಹಾಗೂ ರವಾನೆ, ಸೇವೆ ವಿಳಂಬ ಮಾಡಿದವರ ವೇತನದಿಂದ ಪರಿಹಾರ ಮೊತ್ತವನ್ನು ನೇರವಾಗಿ ಕಟಾಯಿಸುವುದರ ಜೊತೆಗೆ ನಿಗದಿತ ಅವಧಿಯಲ್ಲಿ 1ನೇ ಮೇಲ್ಮನವಿ ಹಾಗೂ 2ನೇ ಮೇಲ್ಮನವಿ ಪ್ರಾಧಿಕಾರಿಗಳನ್ನು ಸಮಯಬದ್ಧ ವಿಲೇವಾರಿಗೆ ಜವಾಬ್ದಾರರನ್ನಾಗಿ ಮಾಡಲಾಗಿದೆ. 7ಕ್ಕೂ ಹೆಚ್ಚು ಬಾರಿ ಉದ್ದೇಶಪೂರ್ವಕವಾಗಿ ವಿಳಂಬ ಮಾಡುವವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಒಂದು ತಿಂಗಳ ಗಡುವನ್ನು ವಿಧಿಸಿರುವುದು ಉಭಯ ಸದನಗಳ ಪ್ರಮುಖ ನಿರ್ಧಾರವಾಗಿತ್ತು.

ನಾಗರೀಕರಿಗೆ ನಿಗದಿತ ಅವಧಿಯಲ್ಲಿ ಸೇವೆ ವಿಲೇವಾರಿ ಮಾಡುವುದಕ್ಕೆ ಅನಾವಶ್ಯಕ ಅಡೆತಡೆಗಳನ್ನು ನೀಡುತ್ತಿದ್ದ ಕೆಲ ಸಿಬ್ಬಂದಿಗಳಿಗೆ ಸರ್ಕಾರವು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ. ಈ ಹೆಜ್ಜೆಯು ಸರ್ಕಾರದ ವ್ಯವಸ್ಥೆಯಲ್ಲಿ ನಾಗರೀಕರಿಗೆ ಭರವಸೆ ಮೂಡಿಸುವ ದೂರಗಾಮಿ ಪರಿಣಾಮ ಬೀರಲಿದೆ.

ಶಾಸಕರು ತಮ್ಮ ಕ್ಷೇತ್ರದಲ್ಲಿ ಸಕಾಲ ಸೇವೆಗಳನ್ನು ನೀಡುತ್ತಿರುವ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಅವರನ್ನು ಸಶಕ್ತೀಕರಿಸಲಾಗಿದೆ.

ನಾಗರಿಕರ ಕುಂದು ಕೊರತೆಗಳನ್ನು ಸಮಯಬದ್ಧವಾಗಿ ಪರಿಹರಿಸಲು ಸಕಾಲವು ಸಮುದಾಯ ಪೊಲೀಸ್ ಸೇವೆಯ ಸಹಕಾರವನ್ನು ಪಡೆಯಲಾಗುತ್ತಿದೆ. ನಾಗರಿಕ ಸಮುದಾಯಗಳನ್ನು ಸಶಕ್ತಗೊಳಿಸುವುದರಲ್ಲಿ ಇದೊಂದು ಮಹತ್ತರ ಹೆಜ್ಜೆಯಾಗಲಿದ್ದು, ರಾಷ್ಟ್ರದಲ್ಲಿಯೇ ನಮ್ಮ ರಾಜ್ಯವನ್ನು ಉತ್ತಮ ಆಡಳಿತ ಹೊಂದಿರುವ ರಾಜ್ಯವನ್ನಾಗಿ ಮಾಡಿದೆ.

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

# ಸಕಾಲ

## "ಇಂದು... ನಾಳೆ...  ಇನ್ನಿಲ್ಲ --ಹೇಳಿದ ದಿನ ತಪ್ಪೊಲ್ಲ"

ಕೂಡಿ ಬಾಳೋಣ ಎಂದೆಂದೂ ಸೇರಿ ದುಡಿಯೋಣ

ಸಕಾಲದಿ ಸೇವೆಯ ನೀಡಲು ಕಲಿಯೋಣ

ಸೇವೆ ನಮ್ಮ ಗುರಿಯೆಂದು ಎಲ್ಲಾ ನುಡಿಯೋಣ

ಸಕಾಲವೇ ಗೌರವವೆಂದು ಎಲ್ಲಾ ತಿಳಿಯೋಣ

ಎಲ್ಲರೂ ಸೇರಲು ಸಕಾಲವೆ ಕಾರಣ

ಕೂಡಿ ಬಾಳೋಣ ಎಂದೆಂದು ಸೇರಿ ದುಡಿಯೋಣ

ಸಕಾಲವೇ ನಮಗೆಲ್ಲ ಶಕ್ತಿಯ ನೀಡಿದೆ

ಸಕಾಲವೇ ನಮಗೆಲ್ಲ ಶಿಸ್ತನು ಕಲಿಸಿದೆ

ಸಕಾಲವೇ ನಮ್ಮಯ ಸ್ನೇಹ ಬೆಸೆದಿದೆ

ಕೂಡಿ ಬಾಳೋಣ ಎಂದೆಂದೂ ಸೇರಿ ದುಡಿಯೋಣ

ಟಿ.ಬಿ. ಜಯಚಂದ್ರ
ಕಾನೂನು, ಸಂಸದೀಯ ವ್ಯವಹಾರಗಳು,
ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು

ದೂರವಾಣಿ : ಕಛೇರಿ : 22254661
22033439
ಕೊಠಡಿ ಸಂಖ್ಯೆ: 327
3ನೇ ಮಹಡಿ, ವಿಧಾನಸೌಧ
ಬೆಂಗಳೂರು – 560 001

# ಸಂದೇಶ

ಹೆಚ್ಚಿನ ಸೇವೆಗಳನ್ನು ಸಕಾಲದಡಿ ತರಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಕಾಲದಡಿ ಈಗ ಒಟ್ಟು 135 ಆನ್‌ಲೈನ್ ಸೇವೆಗಳನ್ನು ನೀಡಲಾಗುತ್ತಿದೆ. ಹೆಚ್ಚು ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲು ಎಲ್ಲಾ ಇಲಾಖೆಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವಂತೆ ತಿಳಿಸಲಾಗಿದೆ. ಅದೇ ರೀತಿ ತುರ್ತು ಅವಶ್ಯಕ ಸೇವೆಗಳನ್ನು ಸಹ ಸಕಾಲದಡಿ ಸೇರಿಸಲು ಕ್ರಮ ವಹಿಸಲಾಗುತ್ತಿದೆ. ಇದರಿಂದಾಗಿ ನಾಗರಿಕರ ಅನುಕೂಲಕ್ಕೆ ತಕ್ಕಂತೆ ಸರ್ಕಾರದ ಸೇವೆಗಳು ಲಭ್ಯವಾಗುತ್ತವೆ.

ವಿವಿಧ ರಾಜ್ಯಗಳ ನಾಗರಿಕ ಸನ್ನದುಗಳಲ್ಲಿ ನಮೂದಿಸಲ್ಪಟ್ಟಿರುವ ಸುಮಾರು 1800 ಸೇವೆಗಳನ್ನು ಪಟ್ಟಿ ಮಾಡಲಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಇಲಾಖೆಯು ತಮ್ಮ ನಾಗರಿಕ ಸನ್ನದಿನಲ್ಲಿರುವ ಹೆಚ್ಚಿನ ಸೇವೆಗಳನ್ನು ಸಕಾಲದಡಿ ತರುವಂತೆ ಸೂಚನೆ ನೀಡಲಾಗಿದೆ. ಹೆಚ್ಚಿನ ಸೇವೆಗಳನ್ನು ಸಕಾಲ ಕಾಯ್ದೆ ಅಡಿ ತರಲು ಕ್ರಮ ವಹಿಸಿದ್ದು, ಇದರಿಂದಾಗಿ ನಾಗರಿಕರಿಗೆ ಸಕಾಲದಡಿ ಹೆಚ್ಚು ಸೇವೆಗಳು ಲಭ್ಯವಾಗಲಿದೆ.

ಫ್ರಾನ್ಸ್ ದೇಶದಲ್ಲಿ ಸಾರ್ವಜನಿಕ ಸೇವೆಗಳ ಅಧಿನಿಯಮ ಜಾರಿಯಲ್ಲಿ ಇಲ್ಲದಿರುವುದರಿಂದ, ಫ್ರಾನ್ಸ್ ದೇಶದ ರಾಯಭಾರಿಯು, ಸರ್ಕಾರಿ ಆಡಳಿತದಲ್ಲಿ ತರಬೇತಿ ಹೊಂದಲು 100 ಇಂಟರ್ನ್‌ಗಳನ್ನು ಸಕಾಲ ಮಿಷನ್‌ಗೆ ಕಳುಹಿಸಿಕೊಡಲು ಉತ್ಸುಕರಾಗಿದ್ದಾರೆ.

ವಿದ್ಯಾರ್ಥಿಗಳು, ಸ್ತ್ರೀಯರು, ಬಳಕೆದಾರರ ಸಂಘಟನೆಗಳು ಸಕಾಲದ ಧ್ಯೇಯವನ್ನು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ, ನಿಗದಿತ ಅವಧಿಯಲ್ಲಿ ಸೇವೆಗಳು ರಾಜ್ಯದ ಪ್ರತಿಯೋರ್ವ ನಾಗರಿಕನಿಗೂ ತಲುಪಲಿ ಎಂದು ಆಶಿಸುತ್ತೇನೆ.

(ಟಿ.ಬಿ ಜಯಚಂದ್ರ)

ಕಾಲು–ಬಾಯಿ ಜ್ವರ, ಚಪ್ಪೆ ಬೇನೆ, ಗಂಟಲು ಬೇನೆ ರೋಗದಿಂದ ರಕ್ಷಿಸಿ ಲಸಿಕೆ ಹಾಕಿಸಿ : ಪಶು ಸಂರಕ್ಷಣೆಯಲ್ಲಿದೆ – ಸರ್ವರ ಹಿತ
ಪಶು ಸಂಪತ್ತು – ದೇಶದ ಸಂಪತ್ತು : ಸಂರಕ್ಷಿಸಿ

## ಮಿಷನ್ ನಿರ್ದೇಶಕರ ಮೇಜಿನಿಂದ

ಕಳೆದ 6 ತಿಂಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಸತತವಾಗಿ 1 ನೇ ಶ್ರೇಯಾಂಕವನ್ನು ಉಳಿಸಿಕೊಂಡಿದೆ. ತುಮಕೂರು ಜಿಲ್ಲೆಯು ನಿರಂತರ ಪ್ರಗತಿಯನ್ನು ಸಾಧಿಸಿದ್ದು, 3 ತಿಂಗಳಲ್ಲಿ 2ನೇ ಶ್ರೇಯಾಂಕದಲ್ಲಿದೆ. ಈ ಮಧ್ಯೆ ರಾಮನಗರ ಹಾಗೂ ಮಂಡ್ಯ ಜಿಲ್ಲೆಗಳು ಪ್ರಗತಿ ಸಾಧಿಸಿದ್ದು ಗರಿಷ್ಠ 10 ರ್‍ಯಾಂಕ್‌ಗಳಲ್ಲಿ ಸೇರಿಕೊಂಡಿವೆ. ಕೋಲಾರವು ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದ್ದು ಹಿಂದಿನ ತಿಂಗಳ 23ನೇ ಶ್ರೇಯಾಂಕಕ್ಕೆ ಹೋಲಿಸಿದರೆ 8ನೇ ರ್‍ಯಾಂಕ್ ಗಳಿಸಿಕೊಂಡಿದೆ. ಪರಿಶ್ರಮದ ಫಲಕಗಳೂ ಕೊನೆಗಂತೂ ಮೂಡಿಬರುತ್ತವೆ.

ಇನ್ನೊಂದೆಡೆ ಬಾಗಲಕೋಟೆ ಜಿಲ್ಲೆಯು 10ನೇ ರ್‍ಯಾಂಕ್‌ನಿಂದ 18ನೇ ರ್‍ಯಾಂಕ್‌ಗೆ ಇಳಿದಿದೆ. ಬೀದರ್ ಹಾಗೂ ಗುಲ್ಬರ್ಗ ಕೊನೆಯ ಶ್ರೇಯಾಂಕದಲ್ಲಿ ಕಂಡುಬರುತ್ತಿದೆ. ಜಿಲ್ಲಾಡಳಿತವು ಸಿಬ್ಬಂದಿಗಳು ಉತ್ತಮ ಸಾಧನೆಗೆ ಮುಂದಾಗುವಂತೆ ಉತ್ತೇಜನ ನೀಡಬೇಕು ಹಾಗೂ ಸಕಾಲವು ಎಲ್ಲಾ ಮನೆ ಮಂದಿಗೂ ತಲಪುವಂತೆ ಶ್ರಮ ವಹಿಸಬೇಕು.

**ವಿಲೇವಾರಿ ಪ್ರಮಾಣ:–** ತಿಂಗಳಲ್ಲಿ 66,393 ಅರ್ಜಿಗಳು ವಿಳಂಬ ವಿಲೇವಾರಿಯಾಗಿದ್ದು, ವಿಲೇವಾರಿ ಪ್ರಮಾಣವು 97.52 ಶೇಕಡವಿದೆ. ವಿಳಂಬವಾದ ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದು ಒಟ್ಟು 33,104 ಅರ್ಜಿಗಳು ವಿಳಂಬವಾಗಿವೆ. ಒಳಾಡಳಿತ ಇಲಾಖೆಯಲ್ಲಿ 37 ಶೇಕಡಾ ಅರ್ಜಿಗಳು ಹಾಗೂ ಶಿಕ್ಷಣ ಇಲಾಖೆಯು 3,787 ಅರ್ಜಿಗಳು ವಿಳಂಬವಾಗಿವೆ. ಹೆಚ್ಚಿನೆಡೆ ಈ ವಿಳಂಬವು ತಾಂತ್ರಿಕ ಅಡಚಣೆಗಳಿಂದಾಗಿ ಆಗಿದ್ದು, ಉದಾ: ತಿಗಸಿ ತಂತ್ರಾಂಶವನ್ನು ಮೇಲ್ದರ್ಜೆಗೇರಿಸಿದ್ದು, ಅಥವಾ ಪ್ರಸ್ತುತ ಚಾಲ್ತಿಯಲ್ಲಿರುವ ತಂತ್ರಾಂಶದಲ್ಲಿ ಬದಲಾವಣೆಗಳು, ಅಥವಾ ಇಲಾಖಾ ವಿಲೇವಾರಿನ್ನು ಸಕಲ ತಂತ್ರಾಂಶದಲ್ಲಿ ಸಮೀಕರಣಗೊಳಿಸುವ ಬಗೆಗಿನ ಸವಾಲುಗಳು ಇತ್ಯಾದಿ. ಈ ಸಮಸ್ಯೆಗಳನ್ನು ಸೇವಾ ಪೂರೈಕೆದಾರರಿಂದ ಪರಿಹರಿಸಲಾಗಿದೆ.

**ತಿರಸ್ಕೃತ ಅರ್ಜಿಗಳು:–** ತಿರಿಸ್ಕೃತ ಅರ್ಜಿಗಳ ಪ್ರಮಾಣ ಡಿಸೆಂಬರ್ ತಿಂಗಳಲ್ಲಿ 3.8 ಶೇಕಡವಿದ್ದದ್ದು, ಈ ತಿಂಗಳಲ್ಲಿ 3.5% ಕ್ಕೆ ಇಳಿದಿದೆ. ಕಾರ್ಯವಿಧಾನದಲ್ಲಿ ಪ್ರಗತಿ, ಚೆಕ್‌ಲಿಸ್ಟ್‌ಗಳ ಮರು ಪರಿಶೀಲನೆಯಿಂದಾಗಿ ಈ ಪ್ರಗತಿ ಉಂಟಾಗಿದೆ. ಸಹಾಯ ಕೇಂದ್ರದೊಂದಿಗೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ನೈಜ ಕಾರಣಗಳಿಲ್ಲದೆ ತಿರಸ್ಕೃತ ಅರ್ಜಿಗಳ ಪ್ರಮಾಣವು ಶೂನ್ಯವಿರಬೇಕೆಂದು ನಾವು ಒತ್ತಿ ಹೇಳುತ್ತೇವೆ. ನಾಗರೀಕರು ಕಛೇರಿಗಳ ತಮ್ಮ ಮೊದಲ ಭೇಟಿಯಲ್ಲಿ ಸೇವೆಗಳನ್ನು ಪಡೆದುಕೊಳ್ಳುವಂತಿರಬೇಕು.

**ಕ್ಷೇತ್ರ ಭೇಟಿ:–** IIMB ಸಂಶೋಧನಾದೊಂದಿಗೆ ಸಕಾಲ ಮಿಷನ್‌ನ ತಂಡವು ಹಲವು ಕಛೇರಿಗಳಿಗೆ ಭೇಟಿಗಳನ್ನು ನೀಡಿದೆ. ಇದರಲ್ಲಿ ಕಂಡುಬರುವ ಮುಖ್ಯ ಅಂಶಗಳೆಂದರೆ, ಸಿಬ್ಬಂದಿಯ ಕೊರತೆ, ಮೇಲ್ದರ್ಜೆಗೇರಿಸಬೇಕಿರುವ ಕಂಪ್ಯೂಟರ್ ತಾಂತ್ರಿಕತೆಗಳು, ಪ್ರಿಂಟರ್, ಸ್ಕ್ಯಾನರ್, ಮುಂತಾದ ಪರಿಕರಗಳನ್ನು ಸೇರಿಸಿಕೊಳ್ಳಬೇಕಾದ ಅವಶ್ಯಕತೆಗಳು, ಸಹಾಯ ಕೇಂದ್ರಗಳು ತಕ್ಕಮಟ್ಟಿಗೆ ಕಾರ್ಯ ನಿರ್ವಹಿಸುತ್ತಿವೆ. ನಾಗರಿಕರು ಸಕಾಲದಡಿ ಸೇವೆಗಳನ್ನು ಪಡೆಯುತ್ತಿರುವ ಬಗ್ಗೆ ಒಂದು ರೀತಿಯ ಬದಲಾದ ವಾತಾವರಣ ಮೂಡಿದೆ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುವರು. ಇದೇ ಸಮಯದಲ್ಲಿ ಜಿಲ್ಲಾಡಳಿತದಿಂದ ಇವನ್ನು ಹೆಚ್ಚಿನ ಸವಲತ್ತನ್ನು ಮಾಡಬಹುದೆಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದರು.

**ದೂರುಗಳು:–** ಪ್ರಸ್ತುತ ತಿಂಗಳಲ್ಲಿ ನಮಗೆ ಬರುವ ಪ್ರತಿಕ್ರಿಯೆಗಳ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ನಿರ್ಧಾರವನ್ನು ಮಾಡಿರುವೆ. ನಾನು ನಮ್ಮ ತಂಡಕ್ಕೆ ನಿರ್ದಿಷ್ಠ ಕರೆ ಮಾಡಿ ನಿರ್ದಿಷ್ಠ ಪ್ರತಿಕ್ರಿಯೆಗಳನ್ನು ತಡೆಯುವಂತೆ ಸೂಚಿಸಿರುವೆ. ಇವುಗಳ ಮಾದರಿಯೊಂದನ್ನು ಅಲ್ಪಾವಧಿಯಲ್ಲಿ ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಇದರಿಂದ ಕಂಡುಬರುವ ಸ್ಪಷ್ಟ ವಿಚಾರವೆಂದರೆ ನಾಗರಿಕರು ಕ್ರಿಯಾತ್ಮಕವಾಗಿ ಭಾಗವಹಿಸುತ್ತಿರುವುದು ಎಲ್ಲಾ ಸಾರ್ವಜನಿಕ ಸೇವಾ ರಂಗದಲ್ಲಿ ಸಕಾಲವಿರಬೇಕೆಂದು ನಾಗರಿಕರ ಬಯಕೆಯಾಗಿದೆ. ಹೊಸ ಇಲಾಖೆಗಳನ್ನು ಪರಿಚಯಿಸುವುದರೊಂದಿಗೆ, ಸಕಾಲದ ದೂರುಗಳು ಈ ತಿಂಗಳಲ್ಲಿ ಹೆಚ್ಚಾಗಿವೆ ಇದೇ ಸಮಯದಲ್ಲಿ, ದಾಖಲೇತರ ದೂರುಗಳಲ್ಲಿ ಇಳಿಕೆ ಆಗಿದೆ. ಕೆಲವರು ತಮ್ಮ ದೂರುಗಳು ಇನ್ನಷ್ಟು ಪರಿಹಾರವಾಗಬೇಕಿದೆ ಎಂದು ಹೇಳುತ್ತಾರೆ. ಇನ್ನು ಕೆಲವರು ಸಿಬ್ಬಂದಿಗಳ ಮನೀಬಾನೆ ಬದಲಾಗಬೇಕೆದೆ ಎಂದಿರುವರು. ಈ ವಿಚಾರವನ್ನು ಗಮನಿಸಲಾಗಿದೆ ಹಾಗೂ ಈ ನ್ಯೂನತೆಗಳು ಆಗಿದ್ದು ಶೀಘ್ರ ಪರಿಹರಿಸಲು ಸೂಕ್ತ ಸೂಚನೆಗಳನ್ನು ನೀಡಲಾಗಿದೆ.

**ಘಟನೆಗಳು**:–

1. ವಿಧಾನ ಸಭಾ ಕ್ಷೇತ್ರ ಶ್ರೇಯಾಂಕ: ಪ್ರತಿಯೊಂದು ಕ್ಷೇತ್ರದಲ್ಲಿರುವ ಹೆಸರಿಸಲಾದ ಅಧಿಕಾರಿಗಳ ಶ್ರೇಯಾಂಕವನ್ನು ಆನ್‌ಲೈನ್‌ನಲ್ಲಿ ನೀಡಲಾಗಿದೆ. ತಂತ್ರಾಂಶವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವಂತಾಗದ ಶಾಸಕರುಗಳ ಆಪ್ತ ಸಹಾಯಕರುಗಳಿಗೆ ಸೂಕ್ತ ತರಬೇತಿ ನೀಡುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.
2. ಅಮೇರಿಕನ್ನಾಡೀತ್ಸವ ಹಾಗೂ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ (ನಾರ್ತ್ ಅಮೇರಿಕಾದ ವಿಶ್ವ ಕನ್ನಡ ಸಂಸ್ಥೆ) ಕರ್ನಾಟಕವು ಅನಿವಾಸಿ ಭಾರತೀಯರಿಗೆ ಆಶಾದಾಯಕ ವ್ಯಾಪಾರಿ ಉತ್ತಮ ವಾತಾವರಣವನ್ನು ನೀಡುತ್ತಿದೆ ಜೊತೆಗೆ ಯುವಕರಿಗೆ ಆಡಳಿತದಲ್ಲಿ ಭಾಗೀದಾರರಾಗುವ ಅವಕಾಶವನ್ನು ಒದಗಿಸುತ್ತದೆ. ಅನಿವಾಸಿ ಭಾರತೀಯ ಪ್ರತಿನಿಧಿಗಳಿಗೆ ಹಾಗೂ ಜಾಗತಿಕ ಉದ್ಯಮದರರಿಗೆ ಸಕಾಲ ಹಾಗೂ ಅದರ ಉಪಕ್ರಮದ ಬಗ್ಗೆ ವಿವರಣೆ ನೀಡಲಾಯಿತು.
3. ನಾಗರಿಕರ ಕುಂದುಕೊರತೆಗಳನ್ನು ನಿವಾರಿಸುವಲ್ಲಿ ಸಮುದಾಯ ಪೊಲೀಸು ಸರ್ಕಾರದೊಂದಿಗೆ ಕೈ ಜೋಡಿಸುವ ಪ್ರಯತ್ನ:– ಡೆಡಿಕೇಟೆಡ್ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಇರುವರಿಂದ ಉದ್ದೇಶಿತ ಸಮುದಾಯ ಪೋಲೀಸರಿಗೆ ದೂರು ಪೆಟ್ಟಿಗೆಗಳನ್ನು ವಿತರಿಸಿ ಅವುಗಳಿಂದ ಶೇಖರಿಸಲ್ಪಟ್ಟ ದೂರುಗಳನ್ನು ಸಮಗ್ರ ದೂರು ನಿರ್ವಹಣಾ ಪೋರ್ಟಲ್ ಇ–ಜನಸ್ಪಂದನದ ಮೂಲಕ ಪರಿಹರಿಸುವ ಮೂಲಕ ನಾಗರಿಕ ಸಹಭಾಗಿತ್ವ ಆಡಳಿತದ ಆಶಯದಲ್ಲಿ ದೂಗಾಮಿ ಹೆಚ್ಚಿಯಾದರಿಸಿದೆ.
4. **ಬೆಸ್ಟ್ ಆಫ್ ಬೆಂಗಳೂರು**:– ಬೆಂಗಳೂರಿನ ಉತ್ತಮ ಆಯಾಮಗಳನ್ನು ಚಿತ್ರಣ ಹೊಂದಿದ ಬೆಸ್ಟ್ ಆಫ್ ಬೆಂಗಳೂರು, ಸಕಲದ ಪರಿಚಯದೊಂದಗೆ ITC ಗಾರ್ಡೆ ನಿಯಮದಲ್ಲಿ ಬಿಡುಗಡೆಗೊಂಡಿತು. ವಿವಿಧ ಕಾರ್ಪೋರೇಟ್ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮಿಷನ್ ನಿರ್ದೇಶಕರು ಭಾಗವಹಿಸಿದ್ದರು. ಕಾರ್ಪೋರೇಟ್‌ಗಳು ತಮ್ಮ ಉದ್ಯಮ ಬದ್ಧತೆ ಯೋಜನೆಗಳನ್ನು ಸಕಾಲದೊಂದೆಗೆ ಸಾಕ್ಷಾತ್ಕರಿಸಬಲ್ಲ ವಿವಿಧ ಮಾದರಿಗನ್ನು ಮುಂದಿಡಲಾಯಿತು.

"ಕಠಿಣ ನಿರ್ಧಾರಗಳನ್ನು ಮಾಡಲು ಉತ್ತಮ ಸಮಯವೆಂಬುದಿಲ್ಲ ನೀವು ಧೈರ್ಯ ತಳೆದು ಮುಂದಡಿಯಿಡಬೇಕು. ಉತ್ತಮ ಆಡಳಿತವೆಂದರೆ ಕಠಿಣ ನಿರ್ಧಾರಗಳನ್ನು ಹೂಡುವುದು, ಜನಪ್ರಿಯವಲ್ಲದ ನಿರ್ಧಾರಗಳನ್ನು ಸಹ!"


ಜಯರಾಂ ರಮೇಶ್, ಆರ್ಥಿಕ ತಜ್ಞರು

**ಡಾ. ಶಾಲಿನಿ ರಜನೀಶ್** ಭಾ.ಆ.ಸೇ
ನಿರ್ದೇಶಕರು – ಸಕಾಲ ಮಿಷನ್

## ಅಡಕ


| ಅಧ್ಯಾಯ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1ಅ | ಜಿಲ್ಲೆವಾರು ಪ್ರಗತಿ ಶ್ರೇಯಾಂಕ | 1 |
| 1ಆ | ತಾಲ್ಲೂಕುವಾರು ಪ್ರಗತಿ ಶ್ರೇಯಾಂಕ | 2 |
| 1ಇ | ಅಸೆಂಬ್ಲಿ ಶ್ರೇಯಾಂಕ | 3 |
| 2ಅ | ಇಲಾಖಾವಾರು – ಒಟ್ಟಾರೆ ಪ್ರಗತಿ ವರದಿ | 4 |
| 2ಆ | ಜಿಲ್ಲಾವಾರು – ಒಟ್ಟಾರೆ ಪ್ರಗತಿ ವರದಿ | 5 |
| 2ಇ | ಸಂಸ್ಥೆವಾರು ಅರ್ಜಿ ಸ್ವೀಕೃತಿ, ವಿಲೇವಾರಿ ಮತ್ತು ಬಾಕಿ | 6 |
| 2ಈ | ಜಿಲ್ಲಾವಾರು ವಿಳಂಬ ವಿಲೇವಾರಿ ಪ್ರವೃತ್ತಿ | 7 |
| 2ಉ | ಇಲಾಖಾವಾರು ವಿಳಂಬ ವಿಲೇವಾರಿ ಪ್ರವೃತ್ತಿ | 8 |
| 2ಊ | ಇಲಾಖಾವಾರು –ಅರ್ಜಿ ತಿರಸ್ಕೃತಗಳ ಮಾಹಿತಿ | 9 |
| 2ಋ | ಇಲಾಖಾವಾರು ಅರ್ಜಿ ತಿರಸ್ಕೃತಗಳ ವಿವರ | 10 |
| 2ಎ | ಇಲಾಖಾವಾರು – ಸೇವಾವಾರು ಅರ್ಜಿ ತಿರಸ್ಕೃತಗಳ ವಿವರ | 11 |
| 2ಐ | ಜಿಲ್ಲಾವಾರು – 7 ಹಾಗೂ 7ಕ್ಕಿಂತ ಹೆಚ್ಚು ಬಾರಿ(ನಿರಂತರ) ವಿಳಂಬ ಮಾಡುತ್ತಿರುವ ಕಛೇರಿಗಳ ವಿವರ | 12 |
| 2ಒ | ಇಲಾಖಾವಾರು – 7 ಹಾಗೂ 7ಕ್ಕಿಂತ ಹೆಚ್ಚು ಬಾರಿ(ನಿರಂತರ) ವಿಳಂಬ ಮಾಡುತ್ತಿರುವ ಕಛೇರಿಗಳ ವಿವರ | 14 |
| 2ಓ | ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಶ್ರೇಯಾಂಕ | 15 |
| 3 | ಕರೆ ಕೇಂದ್ರದ ವರದಿ | 16 |
| 3ಅ | ಇಲಾಖಾವಾರು ಕರೆಗಳ ವರದಿ | 17 |
| 3ಆ | ದೂರುಗಳ ಸ್ಥಿತಿ | 18 |
| 3ಇ | ಪರಿಹಾರ ಧನ ವರದಿ | 19 |
| 3ಈ | ನಾಗರಿಕರ ಮರುಸ್ಪಂದನೆ | 21 |
| 4 | ಘಟನಾವಳಿ ಮತ್ತು ಪತ್ರಿಕಾ ವರದಿ | 24 |

# ಅಧ್ಯಾಯ – 1ಅ: ಜಿಲ್ಲಾವಾರು – ಪ್ರಗತಿ ಶ್ರೇಯಾಂಕ




**Records shown above as on 28/07/2014 12:30:00**

Legend:

1. **ಹಸಿರು:** 1–10 ಶ್ರೇಯಾಂಕ ಪಡೆದಿರುವ ಜಿಲ್ಲೆಗಳು
2. **ಹಳದಿ:** 11–20 ಶ್ರೇಯಾಂಕ ಪಡೆದಿರುವ ಜಿಲ್ಲೆಗಳು
3. **ಗುಲಾಬಿ:** 21–30 ಶ್ರೇಯಾಂಕ ಪಡೆದಿರುವ ಜಿಲ್ಲೆಗಳು

**ಟಿಪ್ಪಣಿ:** ಕಳೆದ 6 ತಿಂಗಳಿಂದ ಚಿಕ್ಕಬಳ್ಳಾಪುರ ಮೊದಲ ಹಾಗೂ ಕಳೆದ 3 ತಿಂಗಳಿಂದ ತುಮಕೂರು 2ನೇ ಶ್ರೇಯಾಂಕದಲ್ಲಿ ರಾರಾಜಿಸುತ್ತಿದೆ. ರಾಮನಗರದ ಶ್ರೇಯಾಂಕ 11ರಿಂದ 6ಕ್ಕೆ ಏರಿದೆ, ಮಂಡ್ಯ ಜಿಲ್ಲೆಯ ಶ್ರೇಯಾಂಕ ಈ ಮಾಹೆಯಲ್ಲಿ 14ರಿಂದ 7ಕ್ಕೇರಿದೆ. ಕೋಲಾರ 23ನೇ ಶ್ರೇಯಾಂಕದಿಂದ 8ನೇ ಶ್ರೇಯಾಂಕಕ್ಕೆ ಏರಿದೆ. ಬಾಗಲಕೋಟೆ ಶ್ರೇಯಾಂಕ 10ರಿಂದ 18ಕ್ಕೆ ಹಾಗೂ ಕುಸಿದಿದೆ. ಹಾಸನ ಶ್ರೇಯಾಂಕ 5ರಿಂದ 3ಕ್ಕೆ ಏರಿದೆ.

## ಅಧ್ಯಾಯ–1ಆ: ತಾಲ್ಲೂಕು ಶ್ರೇಯಾಂಕ

### ಮೊದಲ 10 ಶ್ರೇಯಾಂಕ ಪಡೆದಿರುವ ತಾಲ್ಲೂಕುಗಳ ಪಟ್ಟಿ

| ಜಿಲ್ಲೆ | ತಾಲ್ಲೂಕು | ಮಾಹೆಯಲ್ಲಿ ಸ್ವೀಕರಿಸ ಲಾದ ಅರ್ಜಿಗಳು (ಅ) | ಮಾಹೆಯಲ್ಲಿ ವಿಲೇವಾರಿ ಯಾದ ಅರ್ಜಿಗಳು (ಆ) | ಮಾಹೆಯಲ್ಲಿ ವಿಳಂಬಿತ ಅರ್ಜಿಗಳ ಶೇಕಡಾವಾರು ಪ್ರಮಾಣ (ಇ) | ವಿಳಂಬಿತ ಅರ್ಜಿಗಳ ಶೇಕಡಾ ವಾರು ಶ್ರೇಣಿವಾರು (ಈ) | ಸ್ವೀಕೃತಿಗಳು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಉ) | ಶ್ರೇಣಿವಾರು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಊ) | ಜೂನ್ '14 ಮಾಹೆಯ ಶ್ರೇಯಾಂಕ ಕಾಲಂ ಈ 30% ಮತ್ತು ಊ 70%ಮೇರೆಗೆ |
|---|---|---|---|---|---|---|---|---|
| ಚಿಕ್ಕಬಳ್ಳಾಪುರ | ಗುಡಿಬಂಡೆ | 4043 | 3721 | 0 | 3 | 808 | 8 | 1 |
| ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 23981 | 22187 | 0 | 8 | 1141 | 6 | 2 |
| ಉತ್ತರ ಕನ್ನಡ | ಹಳಿಯಾಳ | 7094 | 7259 | 0 | 6 | 644 | 19 | 3 |
| ಧಾರವಾಡ | ಧಾರವಾಡ | 31194 | 29530 | 0.6 | 49 | 1299 | 5 | 4 |
| ಉತ್ತರ ಕನ್ನಡ | ಕಾರವಾರ | 11294 | 11860 | 0.4 | 26 | 752 | 15 | 5 |
| ಧಾರವಾಡ | ಹುಬ್ಬಳ್ಳಿ | 21226 | 23725 | 0.7 | 55 | 1516 | 4 | 6 |
| ಉತ್ತರ ಕನ್ನಡ | ಶಿರಸಿ | 13131 | 13634 | 0.4 | 27 | 729 | 17 | 7 |
| ತುಮಕೂರು | ತುಮಕೂರು | 46496 | 46041 | 0.6 | 50 | 788 | 11 | 8 |
| ದಕ್ಷಿಣ ಕನ್ನಡ | ಪುತ್ತೂರು | 21424 | 18654 | 0.6 | 48 | 765 | 13 | 9 |
| ತುಮಕೂರು | ತಿಪಟೂರು | 12490 | 11302 | 0.2 | 17 | 567 | 28 | 10 |

**Records shown above as on 28/07/2014 12:30:00**

ಟಿಪ್ಪಣಿ: ತಾಲ್ಲೂಕುಗಳಾದ ತುಮಕೂರು, ಚಿಕ್ಕಬಳ್ಳಾಪುರ, ಧಾರವಾಡ ಹಾಗೂ ಉತ್ತರ ಕನ್ನಡದ ತಾಲ್ಲೂಕುಗಳು ಪ್ರಥಮ 10 ಶ್ರೇಯಾಂಕ ಗಳಸುವಲ್ಲ ಯಶಸ್ವಿಯಾಗಿದೆ, ಈ ಜಿಲ್ಲೆಯ ತಾಲ್ಲುಕುಗಳು ಕ್ರಮವಾಗಿ ತಲಾ 2,2,2, ಹಾಗೂ 3 ಶ್ರೇಯಾಂಕ ಗಳಿಸಿದೆ. ಚಿಕ್ಕಬಳ್ಳಾಪುರದ ಗುಡಿಬಂಡೆ ತಾಲ್ಲೂಕು ಮೊದಲ ಶ್ರೇಯಾಂಕ ಪಡೆಯುವಲ್ಲ ಯಶಸ್ವಿಯಾಗಿದೆ.

### ಕನಿಷ್ಠ 10 ಶ್ರೇಯಾಂಕ ಪಡೆದಿರುವ ತಾಲ್ಲೂಕುಗಳ ಪಟ್ಟಿ

| ಜಿಲ್ಲೆ | ತಾಲ್ಲೂಕು | ಮಾಹೆಯಲ್ಲಿ ಸ್ವೀಕರಿಸ ಲಾದ ಅರ್ಜಿಗಳು (ಅ) | ಮಾಹೆಯಲ್ಲಿ ವಿಲೇವಾರಿ ಯಾದ ಅರ್ಜಿಗಳು (ಆ) | ಮಾಹೆಯಲ್ಲಿ ವಿಳಂಬಿತ ಅರ್ಜಿಗಳ ಶೇಕಡಾವಾರು ಪ್ರಮಾಣ (ಇ) | ವಿಳಂಬಿತ ಅರ್ಜಿಗಳ ಶೇಕಡಾ ವಾರು ಶ್ರೇಣಿವಾರು (ಈ) | ಸ್ವೀಕೃತಿಗಳು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಉ) | ಶ್ರೇಣಿವಾರು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಊ) | ಜೂನ್ '14 ಮಾಹೆಯ ಶ್ರೇಯಾಂಕ ಕಾಲಂ ಈ 30% ಮತ್ತು ಊ 70%ಮೇರೆಗೆ |
|---|---|---|---|---|---|---|---|---|
| ಬೆಂಗಳೂರು ಗ್ರಾಮಾಂತರ | ಹೊಸಕೋಟೆ | 8334 | 7898 | 6.3 | 162 | 308 | 149 | 167 |
| ಗುಲ್ಬರ್ಗ | ಚಿತ್ತಾಪುರ | 12343 | 13778 | 5.6 | 160 | 308 | 151 | 168 |
| ಬೆಂಗಳೂರು | ಆನೆಕಲ್ | 15973 | 15311 | 13.2 | 177 | 319 | 145 | 169 |
| ದಕ್ಷಿಣ ಕನ್ನಡ | ಸುಳ್ಯ | 3744 | 4150 | 4 | 141 | 267 | 165 | 170 |
| ಗುಲ್ಬರ್ಗ | ಜೇವರ್ಗಿ | 7841 | 7605 | 4.9 | 153 | 270 | 163 | 171 |
| ಮೈಸೂರು | ನಂಜನಗೂಡು | 10521 | 9903 | 6.9 | 165 | 276 | 160 | 172 |
| ಬೆಳಗಾಂ | ಖಾನಪುರ | 5951 | 5965 | 4.2 | 144 | 238 | 170 | 173 |
| ದಕ್ಷಿಣ ಕನ್ನಡ | ಬಂಟ್ವಾಳ | 10034 | 11456 | 7.4 | 168 | 257 | 168 | 174 |
| ಬಾಗಲಕೋಟ | ಹುನಗುಂದ | 7447 | 7444 | 6.1 | 161 | 232 | 172 | 175 |
| ಗುಲ್ಬರ್ಗ | ಆಳಂದ | 9098 | 8138 | 10.2 | 176 | 267 | 166 | 176 |
| ಬೆಂಗಳೂರು | ಯಲಹಂಕ | 11485 | 8807 | 7.4 | 166 | 229 | 173 | 177 |

**Records shown above as on 28/07/2014 12:30:00**

ಟಿಪ್ಪಣಿ: ಕೊನೆಯ 10 ಶ್ರೇಯಾಂಕ ಪಡೆದ ತಾಲ್ಲೂಕುಗಳು ರಾಜ್ಯದ ಬಹುತೇಕ ಜಿಲ್ಲೆಯಲ್ಲಿದೆ. ಬೆಂಗಳೂರಿನ ಯಲಹಂಕ ಮತ್ತೆ ಕೊನೆ ಶ್ರೇಣಿಯಲ್ಲಿದೆ.

## ಅಧ್ಯಾಯ 1ಇ : ಅಸೆಂಬ್ಲಿ ಶ್ರೇಯಾಂಕ : ಗರಿಷ್ಟ 24 ಶ್ರೇಯಾಂಕ ಪಡೆದ ಕ್ಷೇತ್ರಗಳು

| ಕ್ಷೇತ್ರ | ತಾಲ್ಲೂಕು | ಮಾಹೆಯಲ್ಲಿ ಸ್ವೀಕರಿಸಲಾದ ಅರ್ಜಿಗಳು (ಅ) | ಮಾಹೆಯಲ್ಲಿ ವಿಲೇವಾರಿ ಯಾದ ಅರ್ಜಿಗಳು (ಆ) | ಮಾಹೆಯಲ್ಲಿ ವಿಳಂಬಿತ ಅರ್ಜಿಗಳ ಶೇಕಡಾವಾರು ಪ್ರಮಾಣ (ಇ) | ವಿಳಂಬಿತ ಅರ್ಜಿಗಳ ಶೇಕಡಾ ವಾರು ಶ್ರೇಣಿವಾರು (ಈ) | ಸ್ವೀಕೃತಿಗಳು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಉ) | ಶ್ರೇಣಿವಾರು ಒಂದು ಲಕ್ಷ ಜನಸಂಖ್ಯಾ ಪ್ರದೇಶ (ಊ) |
|---|---|---|---|---|---|---|---|
| ಗಾಂಧಿನಗರ | 211718 | 212255 | 0 | 1 | 7561 | 1 | **1** |
| ಚಿಕ್ಕ ಬಳ್ಳಾಪುರ | 24434 | 22621 | 0 | 1 | 939 | 10 | **2** |
| ತುಮಕೂರು ನಗರ | 39911 | 39739 | 0.6 | 46 | 1330 | 3 | **3** |
| ಪುತ್ತೂರು | 20285 | 17649 | 0.5 | 36 | 780 | 18 | **4** |
| ಬಿಜಾಪುರ ನಗರ | 33911 | 32379 | 1 | 76 | 1130 | 6 | **5** |
| ಹಾಸನ | 24667 | 24855 | 0.9 | 71 | 948 | 9 | **6** |
| ಚಿತ್ರದುರ್ಗ | 20536 | 20360 | 0.4 | 28 | 684 | 30 | **7** |
| ಜಮಖಂಡಿ | 21517 | 21786 | 0.9 | 71 | 827 | 15 | **8** |
| ರಾಜಾಜಿನಗರ | 18324 | 19573 | 0.6 | 46 | 704 | 26 | **9** |
| ಉಡುಪಿ | 25738 | 25330 | 1.2 | 91 | 1029 | 7 | **10** |
| ಶಿರಸಿ | 14980 | 15560 | 0.4 | 28 | 651 | 34 | **11** |
| ಗುಲ್ಬರ್ಗಾ ದಕ್ಷಿಣ | 38697 | 38906 | 1.3 | 100 | 1289 | 4 | **12** |
| ಬೆಳಗಾವಿ ಉತ್ತರ | 28844 | 27434 | 1.2 | 91 | 961 | 8 | **13** |
| ಕೊಪ್ಪಳ | 19005 | 20022 | 0.3 | 21 | 613 | 38 | **14** |
| ಬೀದರ | 20626 | 18267 | 0.6 | 46 | 687 | 29 | **15** |
| ಚಾಮರಾಜ ನಗರ | 15437 | 14043 | 0.5 | 36 | 617 | 37 | **16** |
| ತಿಪಟೂರು | 12490 | 11302 | 0.2 | 13 | 567 | 47 | **17** |
| ಮಧುಗಿರಿ | 15112 | 14723 | 0.6 | 46 | 657 | 33 | **18** |
| ಹುಬ್ಬಳ ಧಾರವಾಡ ಸೆಂಟ್ರಲ್ | 16825 | 17072 | 0.3 | 21 | 580 | 45 | **19** |
| ಕೋಲಾರ | 21096 | 20978 | 1.1 | 82 | 753 | 19 | **20** |
| ಗೌರಿ ಬಿದನೂರು | 13558 | 11893 | 0 | 1 | 542 | 55 | **21** |
| ದಾವಣಗೆರೆ ದಕ್ಷಿಣ | 14647 | 14049 | 0.6 | 46 | 610 | 39 | **22** |
| ಕುಣಿಗಲ್ | 17347 | 16529 | 1.3 | 100 | 788 | 16 | **23** |
| ಕಾರವಾರ | 14647 | 15357 | 0.4 | 28 | 563 | 49 | **24** |

**Records shown above as on 28/07/2014 12:30:00**

## ಅಧ್ಯಾಯ 2ಅ :ಒಟ್ಟಾರೆ ಇಲಾಖಾವಾರು ಅರ್ಜಿ ಸ್ವೀಕೃತಿ ವಿಲೇವಾರಿ/ಅಹವಾಲು ಸ್ಥಿತಿ/ಅರ್ಜಿ ತಿರಸ್ಕೃತ ವಿವರ

| ಇಲಾಖೆ | ಅರ್ಜಿ ಸಂಖ್ಯೆ | | | | ಅಹವಾಲು- 1 ಸ್ಥಿತಿ | | | | ಅಹವಾಲು-2 ಸ್ಥಿತಿ | | | | ಬಾಕಿ ಅರ್ಜಿ ಸಂಖ್ಯೆ |
|---|---|---|---|---|---|---|---|---|---|---|---|---|---|
| | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | O1 ಸ್ವೀಕೃತಿ | ಒಟ್ಟಾರೆ ವಿಲೇ ವಾರಿ | ಅನು ಮೊದ ನೆಗೊ ಂಡವು | ಒಟ್ಟಾರೆ ತಿರಸ್ಕೃತ ಗೊಂಡ ವುಗಳು | O ಸ್ವೀಕೃ ತಿ | ಒಟ್ಟಾ ರೆ ವಿಲೇ ವಾರಿ | ಅನು ಮೊದ ನೆಗೊ ಂಡವು | ಒಟ್ಟಾರೆ ತಿರಸ್ಕೃತ ಗೊಂಡ ವುಗಳು | |
| ಕಂದಾಯ ಇಲಾಖೆ | 30689625 | 29990517 | 27947672 | 2040030 | 746 | 626 | 337 | 289 | 75 | 21 | 8 | 13 | 6045 |
| ಶಿಕ್ಷಣ ಇಲಾಖೆ | 323852 | 316434 | 299893 | 16007 | 41 | 27 | 6 | 21 | 3 | 3 | 0 | 3 | 1365 |
| ಒಳಾಡಳಿತ | 2363771 | 2327436 | 2282423 | 44047 | 13 | 4 | 1 | 3 | 0 | 0 | 0 | 0 | 1363 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 1583546 | 1550250 | 1517812 | 30553 | 62 | 49 | 27 | 22 | 5 | 4 | 2 | 2 | 423 |
| ಸಾರಿಗೆ ಇಲಾಖೆ | 9298107 | 9213835 | 8982268 | 228128 | 4 | 3 | 1 | 2 | 0 | 0 | 0 | 0 | 296 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 556211 | 554034 | 547974 | 5711 | 0 | 0 | 0 | 0 | 0 | 0 | 0 | 0 | 177 |
| ನಗರಾಭಿವೃದ್ಧಿ | 2045595 | 2030982 | 1939373 | 90542 | 48 | 35 | 33 | 2 | 3 | 2 | 2 | 0 | 154 |
| ಅರಣ್ಯ, ಪರಿಸರ ವಿಜ್ಞಾನ ಇಲಾಖೆ | 1463 | 1011 | 859 | 142 | 0 | 0 | 0 | 0 | 0 | 0 | 0 | 0 | 149 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 1065 | 1021 | 1021 | 0 | 0 | 0 | 0 | 0 | 0 | 0 | 0 | 0 | 38 |
| ಕಾರ್ಮಿಕ ಇಲಾಖೆ | 387757 | 384478 | 377722 | 6537 | 0 | 0 | 0 | 0 | 0 | 0 | 0 | 0 | 21 |
| ಆಹಾರ ಮತ್ತು ನಾಗರಿಕ ಸರಬರಾಜು | 2801302 | 2801087 | 2767500 | 33343 | 2 | 1 | 1 | 0 | 1 | 1 | 0 | 1 | 10 |
| ವಾಣಿಜ್ಯ ಮತ್ತು ಕೈಗಾರಿಕೆ | 80405 | 79751 | 77328 | 2412 | 1 | 0 | 0 | 0 | 0 | 0 | 0 | 0 | 10 |
| ಮಹಿಳೆ ಮತ್ತು ಮಕ್ಕಳ ಕಲ್ಯಾಣ | 366531 | 362271 | 361345 | 442 | 0 | 0 | 0 | 0 | 0 | 0 | 0 | 0 | 7 |
| ಲೋಕೋಪಯೋಗಿ | 856 | 844 | 796 | 47 | 0 | 0 | 0 | 0 | 0 | 0 | 0 | 0 | 6 |
| ಕನ್ನಡ ಮತ್ತು ಸಂಸ್ಕೃತಿ | 1597 | 1584 | 1085 | 499 | 0 | 0 | 0 | 0 | 0 | 0 | 0 | 0 | 5 |
| ಸಹಕಾರ ಇಲಾಖೆ | 14447 | 13548 | 13164 | 360 | 0 | 0 | 0 | 0 | 0 | 0 | 0 | 0 | 1 |
| ಪಶುಸಂಗೋಪನೆ ಮತ್ತು ಮೀನುಗಾರಿಕೆ | 2252 | 2161 | 1876 | 284 | 0 | 0 | 0 | 0 | 0 | 0 | 0 | 0 | 1 |
| ವಸತಿ ಇಲಾಖೆ | 6678 | 6618 | 6485 | 132 | 0 | 0 | 0 | 0 | 0 | 0 | 0 | 0 | 1 |
| ವಾಣಿಜ್ಯ ತೆರಿಗೆ | 4010972 | 4002855 | 3500602 | 501254 | 5 | 5 | 2 | 3 | 0 | 0 | 0 | 0 | 0 |
| ತೋಟಗಾರಿಕೆ | 13680 | 12765 | 12456 | 293 | 0 | 0 | 0 | 0 | 0 | 0 | 0 | 0 | 0 |
| ಯುವಜನ ಸಬಲೀಕರಣ ಮತ್ತು ಕ್ರೀಡೆ | 129 | 127 | 124 | 3 | 0 | 0 | 0 | 0 | 0 | 0 | 0 | 0 | 0 |
| | **54549841** | **53653609** | **50639778** | **3000766** | **922** | **750** | **408** | **342** | **87** | **31** | **12** | **19** | **10072** |

**Records shown above as on 30/06/2014 12:30:00**

# ಅಧ್ಯಾಯ 2ಆ : ಒಟ್ಟಾರೆ ಜಿಲ್ಲಾವಾರು ಅರ್ಜಿ ಸ್ವೀಕೃತಿ ವಿಲೇವಾರಿ/ಅಹವಾಲು ಸ್ಥಿತಿ/ಅರ್ಜಿ ತಿರಸ್ಕೃತ ವಿವರ

| ಜಿಲ್ಲೆ | ಅರ್ಜಿ ಸಂಖ್ಯೆ | | | | ಅಹವಾಲು- 1 ಸ್ಥಿತಿ | | | | ಅಹವಾಲು-2 ಸ್ಥಿತಿ | | | | ಬಾಕಿ ಅರ್ಜಿ ಸಂಖ್ಯೆ |
|---|---|---|---|---|---|---|---|---|---|---|---|---|---|
| | ಒಟ್ಟಾರೆ ಸ್ವೀಕೃತಿ | ವಿಲೇವಾರಿ | ಅನುಮೋದನೆ | ತಿರಸ್ಕೃತಗಳ ಸಂಖ್ಯೆ | O1 ಸ್ವೀಕೃತಿ | ಒಟ್ಟಾರೆ ವಿಲೇವಾರಿ | ಅನುಮೊದನೆ ಗೊಂಡವು | ಒಟ್ಟಾರೆ ತಿರಸ್ಕೃತಗೊಂಡವುಗಳು | O ಸ್ವೀಕೃತಿ | ಒಟ್ಟಾರೆ ವಿಲೇವಾರಿ | ಅನುಮೊದನೆಗೊಂಡವು | ಒಟ್ಟಾರೆ ತಿರಸ್ಕೃತ ಗೊಂಡವುಗಳು | |
| ಬೆಂಗಳೂರು | 9716350 | 9618849 | 8954505 | 662366 | 288 | 196 | 172 | 24 | 9 | 7 | 5 | 2 | 3811 |
| ಮಂಡ್ಯ | 2030581 | 1998156 | 1874200 | 123512 | 20 | 14 | 8 | 6 | 1 | 1 | 1 | 0 | 1001 |
| ಬೆಳಗಾಂ | 3483206 | 3417786 | 3221914 | 195299 | 43 | 29 | 19 | 10 | 0 | 0 | 0 | 0 | 695 |
| ರಾಯಚೂರು | 1649710 | 1613319 | 1525625 | 87325 | 98 | 94 | 40 | 54 | 54 | 3 | 3 | 0 | 527 |
| ರಾಮನಗರ | 1172910 | 1151659 | 1109008 | 42336 | 9 | 6 | 3 | 3 | 0 | 0 | 0 | 0 | 431 |
| ಮೈಸೂರು | 2725684 | 2683112 | 2558735 | 123558 | 36 | 31 | 18 | 13 | 0 | 0 | 0 | 0 | 333 |
| ಗುಲ್ಬರ್ಗ | 1951978 | 1919605 | 1824437 | 94925 | 53 | 47 | 18 | 29 | 4 | 4 | 1 | 3 | 317 |
| ದಕ್ಷಿಣ ಕನ್ನಡ | 1831003 | 1796386 | 1730699 | 65134 | 7 | 5 | 1 | 4 | 0 | 0 | 0 | 0 | 308 |
| ಬೆಂಗಳೂರು ಗ್ರಾಮಾಂತರ | 893063 | 875471 | 829341 | 45994 | 12 | 5 | 5 | 0 | 0 | 0 | 0 | 0 | 281 |
| ಯಾದಗಿರಿ | 881758 | 863042 | 827572 | 35273 | 12 | 11 | 5 | 6 | 1 | 1 | 0 | 1 | 248 |
| ಬಿಜಾಪುರ | 1732292 | 1699522 | 1601696 | 97340 | 18 | 18 | 4 | 14 | 1 | 1 | 0 | 1 | 222 |
| ಬಳ್ಳಾರಿ | 2063531 | 2026431 | 1921483 | 104655 | 49 | 37 | 16 | 21 | 5 | 5 | 0 | 5 | 210 |
| ಚಿಕ್ಕಮಗಳೂರು | 997173 | 979686 | 908649 | 70826 | 9 | 8 | 3 | 5 | 2 | 1 | 1 | 0 | 192 |
| ಬೀದರ್ | 1204767 | 1177490 | 1054691 | 122635 | 41 | 40 | 8 | 32 | 2 | 1 | 0 | 1 | 184 |
| ಬಾಗಲಕೋಟೆ | 1516405 | 1492065 | 1428252 | 63402 | 18 | 18 | 1 | 17 | 2 | 1 | 0 | 1 | 172 |
| ಹಾಸನ | 1953605 | 1927821 | 1811107 | 116366 | 12 | 7 | 3 | 4 | 0 | 0 | 0 | 0 | 145 |
| ಶಿವಮೊಗ್ಗ | 1469899 | 1443620 | 1352905 | 90590 | 12 | 10 | 7 | 3 | 0 | 0 | 0 | 0 | 136 |
| 'ತುಮಕೂರು | 2472889 | 2427779 | 2257118 | 169803 | 33 | 31 | 23 | 8 | 0 | 0 | 0 | 0 | 126 |
| ಗದಗ | 947840 | 929256 | 892684 | 36404 | 8 | 8 | 5 | 3 | 0 | 0 | 0 | 0 | 103 |
| ಧಾರವಾಡ | 1647591 | 1624933 | 1542628 | 82004 | 9 | 4 | 1 | 3 | 1 | 1 | 0 | 1 | 90 |
| ಹಾವೇರಿ | 1209016 | 1183277 | 1123011 | 59982 | 7 | 7 | 2 | 5 | 0 | 0 | 0 | 0 | 82 |
| ಕೋಲಾರ | 1393544 | 1371959 | 1290559 | 80809 | 27 | 27 | 13 | 14 | 3 | 3 | 0 | 3 | 76 |
| ಉಡುಪಿ | 1006552 | 990381 | 963642 | 26447 | 14 | 14 | 11 | 3 | 1 | 1 | 1 | 0 | 76 |
| ಚಿತ್ರದುರ್ಗ | 1543371 | 1514690 | 1436330 | 78071 | 10 | 10 | 6 | 4 | 0 | 0 | 0 | 0 | 65 |
| ದಾವಣಗೆರೆ | 1705549 | 1670283 | 1578552 | 91375 | 42 | 40 | 2 | 38 | 0 | 0 | 0 | 0 | 58 |
| ಕೊಪ್ಪಳ | 1206818 | 1183988 | 1139482 | 44069 | 3 | 3 | 0 | 3 | 0 | 0 | 0 | 0 | 57 |
| ಚಿಕ್ಕಬಳ್ಳಾಪುರ | 1260180 | 1229432 | 1155048 | 73702 | 13 | 13 | 3 | 10 | 0 | 0 | 0 | 0 | 50 |
| ಚಾಮರಾಜನಗರ | 938101 | 922580 | 873993 | 48315 | 9 | 8 | 5 | 3 | 0 | 0 | 0 | 0 | 45 |
| ಕೊಡಗು | 490085 | 484582 | 459383 | 24927 | 2 | 1 | 0 | 1 | 0 | 0 | 0 | 0 | 16 |
| ಉತ್ತರ ಕನ್ನಡ | 1454390 | 1436449 | 1392611 | 43322 | 8 | 8 | 6 | 2 | 1 | 1 | 0 | 1 | 15 |
| ಒಟ್ಟು | 54549841 | 53653609 | 50639860 | 3000766 | 922 | 750 | 408 | 342 | 87 | 31 | 12 | 19 | 10072 |

**Records shown above as on 28/07/2014 12:30:00**


# ಅಧ್ಯಾಯ 2ಇ: ಸಂಸ್ಥೇವಾರು ಅರ್ಜಿ ಸ್ವೀಕೃತಿ ವಿಲೇವಾರಿ ಮತ್ತು ಬಾಕಿ ವಿವರ

| ಕ್ರ ಸಂ | ಸಂಸ್ಥೆ | ಮಾಹೆಯಲ್ಲಿ ಸ್ವೀಕರಿಸಲಾದ ಅರ್ಜಿಗಳು (ಅ) | ಮಾಹೆಯಲ್ಲಿ ವಿಲೇವಾರಿ ಯಾದ ಅರ್ಜಿಗಳು (ಆ) | ವಿಳಂಬ ವಿಲೆ |
|---|---|---|---|---|
| 1 | ಕಂದಾಯ ಇಲಾಖೆ | 26851749 | 26166638 | 5131 |
| 2 | ಒಳಾಡಳಿತ ಇಲಾಖೆ | 2357800 | 2321124 | 1335 |
| 3 | ಪದವಿ ಪೂರ್ವ ಶಿಕ್ಷಣ ಇಲಾಖೆ | 116900 | 115919 | 981 |
| 4 | ನೋಂದಣಿ ಮತ್ತು ಮುದ್ರಾಂಕ ಇಲಾಖೆ | 3029651 | 3027082 | 711 |
| 5 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 1583936 | 1550597 | 413 |
| 6 | ಸಾರಿಗೆ ಇಲಾಖೆ | 6609618 | 6537019 | 222 |
| 7 | .ಸಾರ್ವಜನಿಕ ಶಿಕ್ಷಣ ಇಲಾಖೆ | 124828 | 119449 | 214 |
| 8 | ಭೂ ಮೋಜಣಿ ಮತ್ತು ಭೂ ಕಂದಾಯ | 809028 | 797085 | 202 |
| 9 | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | 1463 | 1012 | 149 |
| 10 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 532414 | 530348 | 147 |
| 11 | ನಗರ ಪುರಸಭಾ ಪರಿಷತ್ತು | 741919 | 735925 | 82 |
| 12 | ಸಾರಿಗೆ ಸಂಸ್ಥೆಗಳು (ಕ.ರಾ.ರ.ಸಾ.ಸಂ/ಬೆಂ. ಮ.ಸಾ.ಸಂ) | 1207084 | 1198731 | 55 |
| 13 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 1065 | 1021 | 38 |
| 14 | ಔಷಧಗಳ ನಿಯಂತ್ರಣ ಇಲಾಖೆ | 22483 | 22342 | 30 |
| 15 | ಆಯುಕ್ತಾಲಯ ಬೆಂಗಳೂರು ಹಾಗೂ ಮೈಸೂರು, ಸಿ ಪಿ ಐ | 1912 | 1787 | 24 |
| 16 | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 19033 | 18806 | 20 |
| 17 | ಬೃಹತ್ ಬೆಂಗಳೂರು ಮಹಾನಗರಪಾಲಿಕೆ | 234042 | 232260 | 19 |
| 18 | ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷೆ ಮತ್ತು ಆರೋಗ್ಯ | 22126 | 21099 | 16 |
| 19 | ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 331424 | 329214 | 14 |
| 20 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 4617 | 4566 | 12 |
| 21 | ಉನ್ನತ ಶಿಕ್ಷಣ ಕಾಲೇಜುಗಳು ಕಾಲೇಜಿಯೇಟ್ ಶಿಕ್ಷಣ | 9079 | 8924 | 12 |
| 22 | ಪಟ್ಟಣ ಪುರಸಭಾ ಪರಿಷತ್ತು | 536071 | 532516 | 11 |
| 23 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 80415 | 79752 | 10 |
| 24 | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 2802519 | 2802337 | 9 |
| 25 | ಸಾರ್ವಜನಿಕ ಗ್ರಂಥಾಲಯ | 15495 | 15366 | 7 |
| 26 | ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 856 | 844 | 6 |
| 27 | ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 366674 | 362441 | 6 |
| 28 | ಪಟ್ಟಣ ಪಂಚಾಯತ್ | 189911 | 188718 | 5 |
| 29 | ಕಾರ್ಮಿಕ ಇಲಾಖೆ | 362020 | 359863 | 5 |
| 30 | ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 163955 | 162450 | 5 |
| 31 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 1146 | 1136 | 5 |
| 32 | ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗ | 2640 | 2624 | 4 |
| 33 | ಘಟಕ ಕಾಲೇಜುಗಳ ವಿಶ್ವವಿದ್ಯಾನಿಲಯ | 3377 | 3374 | 2 |
| 34 | ವಿಶ್ವವಿದ್ಯಾನಿಲಯ ಪರೀಕ್ಷಾಂಗ ವಿಭಾಗ | 46746 | 46263 | 1 |
| 35 | ಮೀನುಗಾರಿಕೆ ಇಲಾಖೆ | 2252 | 2161 | 1 |
| 36 | ಅಗ್ನಿ ಶಾಮಕ ಇಲಾಖೆ | 6319 | 6318 | 1 |
| 37 | ನಗರ ಪಾಲಿಕೆ/ಪೌರ ನಿಗಮಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) | 320245 | 318305 | 1 |
| 38 | ಕರ್ನಾಟಕ ಗೃಹ ಮಂಡಳಿ | 6200 | 6148 | 1 |
| 39 | ಸಹಕಾರ ಸಂಘಗಳ ನೋಂದಣಿ ಇಲಾಖೆ | 7280 | 6954 | 1 |
| **Total:** | | **49526292** | **48638518** | **10072** |

**Records shown above as on 28/07/2014 13:00:00**

**ಟಿಪ್ಪಣಿ:** ಮೇಲಿನ ಕೋಷ್ಟಕದಲ್ಲಿ ಹಲವು ಇಲಾಖೆ/ಸಂಸ್ಥೆಗಳ ವಿಳಂಬವಿಲೇವಾರಿ ವಿವರವನ್ನು ನೀಡಲಾಗಿದೆ. ಕಂದಾಯ ಇಲಾಖೆ, ಒಳಾಡಳಿತ, ಭೂ ನೋಂದಣಿ ಮತ್ತು ಭೂ ಕಂದಾಯದ ವಿಳಂಬ ವಿಲೇ ಹೆಚ್ಚಾಗಿದ್ದು ಕಂದಾಯ ಇಲಾಖೆಯ ಪಾಲು 50% ಇದೆ. ಕ್ರಮ ಸಂಖ್ಯೆ 24 ರಿಂದ 39ರವರೆಗಿನ ಇಲಾಖೆ/ಸಂಸ್ಥೆಗಳಲ್ಲಿ ವಿಳಂಬ ವಿಲೇ ಕಡಿಮೆಯಿರುವುದು ಶ್ಲಾಘನೀಯ. ಎಲ್ಲಾ ಇಲಾಖೆಗಳು/ಸಂಸ್ಥೆಗಳು ಶೂನ್ಯ ವಿಳಂಬಕ್ಕಾಗಿ ಶ್ರಮಿಸಬೇಕಿದೆ.

## 2ಈ: ಮಾಹೆಯ ಜಿಲ್ಲಾವಾರು ವಿಳಂಬ ವಿಲೆ ಪ್ರವೃತ್ತಿ ವರದಿ




Records shown above as on 28/07/2014 13:30:00

**Legend**

ಗುಲಾಬಿ: **ಜಿಲ್ಲೆಗಳಲ್ಲಿ ಕಡಿಮೆ ವಿಳಂಬ ಪ್ರಮಾಣ**
**ಹಳದಿ: ಜಿಲ್ಲೆಗಳಲ್ಲಿ ಮಧ್ಯಮ ಪ್ರಮಾಣದ ವಿಳಂಬ**
ಹಸಿರು: **ಜಿಲ್ಲೆಗಳಲ್ಲಿ ಗರಿಷ್ಟ ಪ್ರಮಾಣದ ವಿಳಂಬ**

ಟಿಪ್ಪಣಿ: ರಾಜ್ಯದ ವಿಳಂಬ ವಿಲೆ ಸರಾಸರಿ (2.48%) ವಿಳಂಬದ ಬಹುತೇಕ ಪಾಲು 5 ಜಿಲ್ಲೆಯದಾಗಿದೆ ಅವುಗಳೆಂದರೆ ಬೆಂಗಳೂರು, ಬಳ್ಳಾರಿ, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರದ್ದಾಗಿದೆ. ಕಳೆದ ಮಾಹೆಗೆ ಹೋಲಿಸಿದರೆ ಈ ಮಾಹೆಯಲ್ಲಿ ವಿಳಂಬ ವಿಲೇ ಕಡಿಮೆಯಾಗಿದೆ 2.86% ನಿಂದ 2.48%ಗೆ. ಈ ಜಿಲ್ಲೆಗಳ ವಿಲೇ ಪ್ರಮಾಣ 6 ಲಕ್ಷ ಅರ್ಜಿಗಳು ಈ ಮಾಹೆಯಲ್ಲಿ, ಇದು ರಾಜ್ಯದ ಸರಾಸರಿಯ 23%ಕ್ಕೆ ಸಮನಾಗಿದೆ.

## ಅಧ್ಯಾಯ 2ಉ: ಜುಲೈ'14 ಮಾಹೆಯ ಇಲಾಖಾವಾರು ವಿಳಂಬ ವಿಲೆ ಪ್ರವೃತ್ತಿ ವರದಿ


| ಕ್ರ ಸಂ | ಇಲಾಖೆ | ಮಾಹೆಯಲ್ಲಿ ವಿಲೇಯಾಗಿರುವ ಅರ್ಜಿ (ಎ) | 1-3 ದಿನಗಳು | 4-7 ದಿನಗಳು | 8-14 ದಿನಗಳು | 15-30 ದಿನಗಳು | 30 ಕ್ಕಿಂತ ಹೆಚ್ಚು ದಿನದಿಂದ ಬಾಕಿ | ಒಟ್ಟು | ಜುಲೈ'14ರ ವಿಳಂಬ ವಿಲೇ ಪ್ರಮಾಣ |
|---|---|---|---|---|---|---|---|---|---|
| 1 | ಶಿಕ್ಷಣ ಇಲಾಖೆ | 30143 | 8535 | 317 | 100 | 51 | 64 | 9067 | 30.08% |
| 2 | ಅರಣ್ಯ, ಪರಿಸರ ವಿಜ್ಞಾನ ಇಲಾಖೆ | 172 | 10 | 14 | 12 | 12 | 2 | 50 | 29.07% |
| 3 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 14 | 0 | 3 | 0 | 1 | 0 | 4 | 28.57% |
| 4 | ಯುವಜನ ಸಬಲೀಕರಣ ಮತ್ತು ಕ್ರೀಡೆ | 21 | 2 | 0 | 1 | 0 | 0 | 3 | 14.29% |
| 5 | ವಸತಿ ಇಲಾಖೆ | 122 | 9 | 0 | 0 | 0 | 0 | 9 | 7.38% |
| 6 | ಒಳಾಡಳಿತ ಇಲಾಖೆ | 97667 | 3787 | 1178 | 656 | 426 | 300 | 6347 | 6.50% |
| 7 | ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 55 | 1 | 0 | 1 | 0 | 0 | 2 | 3.64% |
| 8 | ಕಂದಾಯ ಇಲಾಖೆ | 1348434 | 33104 | 6192 | 1781 | 1281 | 1494 | 43852 | 3.25% |
| 9 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 23774 | 537 | 58 | 17 | 4 | 12 | 628 | 2.64% |
| 10 | ಸಹಕಾರ ಇಲಾಖೆ | 1592 | 17 | 22 | 0 | 2 | 0 | 41 | 2.58% |
| 11 | ನಗರಾಭಿವೃದ್ಧಿ | 70393 | 1318 | 194 | 32 | 16 | 3 | 1563 | 2.22% |
| 12 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 96319 | 1591 | 206 | 52 | 18 | 19 | 1886 | 1.96% |
| 13 | ಕಾರ್ಮಿಕ ಇಲಾಖೆ | 12153 | 114 | 1 | 0 | 1 | 4 | 120 | 0.99% |
| 14 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 152 | 1 | 0 | 0 | 0 | 0 | 1 | 0.66% |
| 15 | ಮಹಿಳೆ ಮತ್ತು ಮಕ್ಕಳ ಕಲ್ಯಾಣ | 28602 | 123 | 21 | 2 | 0 | 0 | 146 | 0.51% |
| 16 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 4169 | 6 | 4 | 1 | 0 | 4 | 15 | 0.36% |
| 17 | ಸಾರಿಗೆ ಇಲಾಖೆ | 788302 | 1836 | 285 | 194 | 57 | 93 | 2465 | 0.31% |
| 18 | ಆಹಾರ ಮತ್ತು ನಾಗರಿಕರ ಸರಬರಾಜು | 66479 | 100 | 13 | 11 | 2 | 0 | 126 | 0.19% |
| 19 | ತೋಟಗಾರಿಕೆ ಇಲಾಖೆ | 3510 | 5 | 0 | 0 | 0 | 0 | 5 | 0.14% |
| 20 | ವಾಣಿಜ್ಯ ತೆರಿಗೆ ಇಲಾಖೆ | 107534 | 60 | 1 | 1 | 0 | 1 | 63 | 0.06% |
| | **Total** | **2679607** | **51156** | **8509** | **2861** | **1871** | **1996** | **66393** | **2.48%** |

Records shown above as on 28/07/2014 13:30:00

**ಟಿಪ್ಪಣಿ:** ಜುಲೈ'14 ಮಾಹೆಯ ರಾಜ್ಯದ ವಿಳಂಬ ವಿಲೇವಾರಿ ಪ್ರಮಾಣ 2.48% ಇದೆ. ಬಹುತೇಕ ವಿಳಂಬವು 1-3 ದಿನಗಳ ಸಮಯದ್ದಾಗಿದೆ ಇದರ ಪ್ರಮಾಣ 77% ಇದೆ.

ಶಿಕ್ಷಣ, ಒಳಾಡಳಿತ ಹಾಗೂ ಕಂದಾಯ ಇಲಾಖೆಯ ಹೆಚ್ಚು ಅರ್ಜಿ ಸ್ವೀಕೃತಿಯ ಸಲುವಾಗಿ ವಿಳಂಬ ಪಾಲು 90% ಇದೆ. ಇದು ರಾಜ್ಯದ ಸರಾಸರಿ ವಿಳಂಬದ ಮೇಲೆ ಪರಿಣಾಮ ಬೀರಿದೆ. ಸೂಕ್ತ ಕಾರ್ಯ ಅಧ್ಯಾಯದಿಂದ ಇಲಾಖೆಯು ವಿಳಂಬ ವಿಲೇ ಪ್ರಕ್ರಿಯೆಯನ್ನು ನಿಯಂತ್ರಿಸಬೇಕಿದೆ.

## ಅಧ್ಯಾಯ 2ಊ: ಜುಲೈ'14 ಮಾಹೆಯ **ಜಿಲ್ಲಾವಾರು** ಅರ್ಜಿ ತಿರಸ್ಕೃತಗಳ ವಿವರ




Records shown above as on 28/07/2014 13:30:00

**Legend**

1. ಗುಲಾಬಿ: ಜಿಲ್ಲೆಗಳಲ್ಲಿ ಕಡಿಮೆ ಅರ್ಜಿ ತಿರಸ್ಕೃತಗಳು ಕಂಡುಬಂದಿವೆ.
2. ಹಳದಿ: ಜಿಲ್ಲೆಗಳಲ್ಲಿ ಮದ್ಯಮ **ಪ್ರಮಾಣ ಅರ್ಜಿ ತಿರಸ್ಕೃತಗಳು ಕಂಡು ಬಂದಿವೆ**.
3. **ಹಸಿರು: ಜಿಲ್ಲೆಗಳಲ್ಲಿ ಅತೀ ಹೆಚ್ಚು ಅರ್ಜಿ ತಿರಸ್ಕೃತಗಳು ಕಂಡು ಬಂದಿವೆ.**

**ಟಿಪ್ಪಣಿ:** ಜುಲೈ '14 ಮಾಹೆಯಲ್ಲಿ 15 ಜಿಲ್ಲೆಗಳಲ್ಲಿ ಅರ್ಜಿ ತಿರಸ್ಕೃತ ಪ್ರಮಾಣ ರಾಜ್ಯದ ಸರಾಸರಿಗಿಂತ 3.58% ಹೆಚ್ಚಿದೆ. ಕಳೆದ ಮಾಹೆಗಿಂತ ಅರ್ಜಿ ತಿರಸ್ಕೃತ ಪ್ರಮಾಣ ಈ ಮಾಹೆಯಲ್ಲಿ ಕಡಿಮೆಯಿದೆ (3.8%ರಿಂದ 3.58% ಆಗಿದೆ) ಇದು ಆಯಾ ಜಿಲ್ಲೆ ಆಡಳತದ ವಿಶ್ಲೇಷಣೆಯ ಕಾರ್ಯ ವೈಖರಿಯ ಫಲಶ್ರುತಿಯಾಗಿದೆ.

## ಅಧ್ಯಾಯ ೨ಋ: ಜುಲೈ'14 ಮಾಹೆಯ ಇಲಾಖಾವಾರು ಅರ್ಜಿ ತಿರಸ್ಕೃತಗಳ ವಿವರ

| ಇಲಾಖೆ ಹೆಸರು | ಸ್ವೀಕೃತಿ | ವಿಲೇವಾರಿ | ತಿರಸ್ಕೃತ | ತಿರಸ್ಕೃತ ಪ್ರಮಾಣ (%age) |
|---|---|---|---|---|
| ವಾಣಿಜ್ಯ ತೆರಿಗೆ ಇಲಾಖೆ | 104040 | 105430 | 8194 | 7.77 |
| ನಗರ ಸಭೆ | 27624 | 28102 | 1797 | 6.39 |
| ಸಾರ್ವಜನಿಕ ಶಿಕ್ಷಣ | 8522 | 9108 | 553 | 6.07 |
| ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 4204 | 4066 | 244 | 6 |
| ಕಂದಾಯ ಇಲಾಖೆ | 1207427 | 1144444 | 64655 | 5.65 |
| ನಗರ ಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) | 9815 | 10091 | 545 | 5.4 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 103453 | 93209 | 4739 | 5.08 |
| ಪುರಸಭೆ | 17915 | 18043 | 743 | 4.12 |
| ಪಟ್ಟಣ ಪಂಚಾಯತ್ | 6294 | 6415 | 154 | 2.4 |
| ಒಳಾಡಳಿತ ಇಲಾಖೆ | 96844 | 96605 | 2127 | 2.2 |
| ಸಾರಿಗೆ ಇಲಾಖೆ | 335112 | 332989 | 6734 | 2.02 |

**Records shown above as on 28/07/2014 13:30:00**

**ಟಿಪ್ಪಣಿ: ಜುಲೈ'14 ಮಾಹೆಯ ರಾಜ್ಯದ ಅರ್ಜಿ ತಿರಸ್ಕೃತ ಪ್ರಮಾಣ 3.58% ಇದೆ ಕಳೆದ ಮಾಹೆಗಿಂತ ಕಡಿಮೆ ಇದೆ(3.8%).** ಬಹುತೇಕ ಇಲಾಖೆಯ ಅರ್ಜಿ ತಿರಸ್ಕೃತಗಳ ಪ್ರಮಾಣವನ್ನು ಮೇಲಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ. ಇಲಾಖೆ/ಸಂಸ್ಥೆಗಳಾದ ಕಂದಾಯ, ವಾಣಿಜ್ಯ ತೆರಿಗೆ ಹಾಗೂ ನಗರ ಪಾಲಿಕೆಯಲ್ಲಿ ಬಹಳ ಪ್ರಮಾಣದ ಅರ್ಜಿಗಳು ಸ್ವೀಕೃತಿಯಾಗಿದೆ ಇದು ರಾಜ್ಯ ಸರಾಸರಿಯ 60% ಇದೆ.

ಇದರಿಂದಾಗಿ ರಾಜ್ಯ ಸರಾಸರಿ ಪ್ರಮಾಣದ ಮೇಲೆ ಪರಿಣಾಮ ಬೀರಿದೆ. ಕನ್ನಡ ಸಂಸ್ಕೃತಿ, ಮೀನುಗಾರಿಕೆ ಹಾಗೂ ವಾಯು ನಿಯಂತ್ರಣ ಇಲಾಖೆಗಳಲ್ಲಿ ಅರ್ಜಿ ಸ್ವೀಕೃತಿ ಬಹಳ ಕಡಿಮೆ ಇದೆ ಆದರೆ ಅರ್ಜಿ ತಿರಸ್ಕೃತಗಳು ತುಸು ಪ್ರಮಾಣದಲ್ಲಿ ಕಂಡು ಬಂದಿದೆ.

## ಅಧ್ಯಾಯ ಎ: ಕೆಳಗಿನ ಕೋಷ್ಟಕದಲ್ಲಿ ಇಲಾಖಾವಾರು –ಸೇವಾವಾರು ಅರ್ಜಿ ತಿರಸ್ಕೃತಗಳ ವಿವರಣೆ ನೀಡಲಾಗಿದೆ

| ಕ್ರ ಸಂ | ಸೇವೆಯ ಹೆಸರು | ಇಲಾಖೆಯ ಹೆಸರು | ಒಟ್ಟು ಸ್ವೀಕೃತಿ | ಒಟ್ಟು ವಿಲೇವಾರಿ | ತಿರಸ್ಕೃತಗಳ ಪ್ರಮಾಣ | ತಿರಸ್ಕೃತಗಳ ಪ್ರಮಾಣ |
|---|---|---|---|---|---|---|
| 1 | ಅಕುಶಲ ಕಾರ್ಮಿಕರಿಗೆ ಜಾಬ್ ಕಾರ್ಡ್ ಒದಗಿಸುವುದು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 12820 | 9296 | 2660 | 28.61 |
| 2 | ಸಣ್ಣ ಮತ್ತು ಮಧ್ಯಮ ಪ್ರಮಾಣ ರೈತ ಪ್ರಮಾಣ ಪತ್ರ | ಕಂದಾಯ ಇಲಾಖೆ | 12315 | 13093 | 3197 | 24.42 |
| 3 | ಎಫ್ ನಮೂನೆ ನೀಡುವುದು | ವಾಣಿಜ್ಯ ತೆರಿಗೆ ಇಲಾಖೆ | 10825 | 11752 | 2548 | 21.68 |
| 4 | ಸಂಧ್ಯಾ ಸುರಕ್ಷೆ ಪಿಂಚಣಿ | ಕಂದಾಯ ಇಲಾಖೆ | 69182 | 23477 | 4105 | 17.49 |
| 5 | ಇಂದಿರಾಗಾಂದಿ ವೃದ್ಯಾಪ ವೇತನ | ಕಂದಾಯ ಇಲಾಖೆ | 11184 | 4142 | 636 | 15.35 |
| 6 | ನಿರ್ಗತಿಕ ವಿಧವಾ ವೇತನ | ಕಂದಾಯ ಇಲಾಖೆ | 28857 | 11015 | 1282 | 11.64 |
| 7 | ಅಂಗವಿಕಲರಿಗೆ ಪಿಂಚಣಿ | ಕಂದಾಯ ಇಲಾಖೆ | 14320 | 5282 | 564 | 10.68 |
| 8 | ಕರ ನಿರ್ಧರಣಾ ಪಟ್ಟಿಯ ಬದಲಾವಣೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 14003 | 11790 | 925 | 7.85 |
| 9 | ಅಕುಶಲ ಕಾರ್ಮಿಕರಿಗೆ ಉದ್ಯೋವನ್ನು ಒದಗಿಸುವುದು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 16154 | 13272 | 801 | 6.04 |
| 10 | ಡೊಮಿಸಿಲನ್ ಪ್ರಮಾಣ ಪತ್ರ | ಕಂದಾಯ ಇಲಾಖೆ | 12312 | 11032 | 653 | 5.92 |
| 11 | ಎಲ್ಲಾ ತೆರನಾದ ಜಾತಿ ಪ್ರಮಾಣ ಪತ್ರ | ಕಂದಾಯ ಇಲಾಖೆ | 503924 | 542949 | 29681 | 5.47 |
| 12 | ಸಿ ನಮೂನೆ ವಿತರಣೆ ಕೇಂದ್ರಿಯ ಕಾಯಿದೆಯಡಿ | ವಾಣಿಜ್ಯ ತೆರಿಗೆ ಇಲಾಖೆ | 83152 | 83341 | 4169 | 5 |
| 13 | ಸ್ಥಳೀಯ ವಾಸಸ್ಥಾನ ಪ್ರಮಾಣ ಪತ್ರ | ಕಂದಾಯ ಇಲಾಖೆ | 110286 | 112799 | 4999 | 4.43 |
| 14 | ಪಾಸ್ ಪೋರ್ಟ್ ಸತ್ಯಾಪನೆಗಾಗಿ ನಿರಾಕ್ಷೇಪಣಾ ಪತ್ರ | ಒಳಾಡಳಿತ ಇಲಾಖೆ | 35586 | 34311 | 1435 | 4.18 |
| 15 | ಮಾಲಿಕತ್ವ ಬದಲಾವಣೆ | ಸಾರಿಗೆ ಇಲಾಖೆ | 40187 | 40027 | 1648 | 4.12 |
| 16 | ಖಾತೆ ಬದಲಾವಣೆ ( ವಿವಾದಿತವಲ್ಲದ ಪ್ರಕರಣಗಳು) | ಕಂದಾಯ ಇಲಾಖೆ | 138345 | 112969 | 4061 | 3.59 |
| 17 | ಜನನ ಮರಣ/ಜೀವಂತ ಪ್ರಮಾಣ ಪತ್ರ | ನಗರಸಭೆ | 17570 | 17869 | 616 | 3.45 |
| 18 | ಎಲ್ಲಾ ತೆರನಾದ ಆದಾಯ ಪ್ರಮಾಣ ಪತ್ರ | ಕಂದಾಯ ಇಲಾಖೆ | 257590 | 259822 | 8872 | 3.41 |
| 19 | ವಾಹನ ಕಲಕಾ ಪರವಾನಿಗೆ | ಸಾರಿಗೆ | 84350 | 83005 | 2587 | 3.12 |

**Records shown above as on 28/07/2014 13:30:00**

**ಟಿಪ್ಪಣಿ:** ಇಲಾಖಾವಾರು ಸೇವೆಗಳ ಅರ್ಜಿ ತಿರಸ್ಕೃತಿಯನ್ನು ಇಲ್ಲಿ ಮಂಡಿಸಲಾಗಿದೆ, ಇಲಾಖಾ ಮುಖ್ಯಸ್ಥರು ಇದರ ಬಗ್ಗೆ ವಿಶ್ಲೇಷಿಸಿ / ಕೂಲಂಕುಷವಾಗಿ ಕಾರಣವನ್ನು ಪರಿಶೀಲಿಸಿ ಅರ್ಜಿ ತಿರಸ್ಕೃತಿಯ ಪ್ರಮಾಣವನ್ನು ಕಡಿಮೆ/ನಿಯಂತ್ರಣಗೊಳಸಬೇಕಿದೆ.

## ಅಧ್ಯಾಯ-2 ಐ: 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಚೇರಿಗಳ ಸಂಖ್ಯೆ – ಜಿಲ್ಲಾವಾರು

### ಅಧಿನಿಯಮದ ಪ್ರಕರಣ 14 ರ ಪ್ರಕಾರ ನಿಗದಿಪಡಿಸಿದ ಅವಧಿಯೊಳಗೆ ಸೇವೆಗಳನ್ನು ನೀಡುವ ಸಂಸ್ಕೃತಿಯನ್ನು ಬೆಳೆಸುವುದು.


**ಇದರಡಿ ಇರುವ ಅಂದರೆ ಸೆಕ್ಷನ್ 14(2) ರ ಪ್ರಕಾರ** ರೂಢಿಗತ ಮತ್ತು ಉದ್ದೇಶಪೂರ್ವಕವಾಗಿ ಯಾವುದೇ ಉಚಿತ ಕಾರಣಗಳಿಲ್ಲದೆ ಕರ್ತವ್ಯ ಲೋಪವೆಸಗಿದ ಮತ್ತು ಅರ್ಜಿಯನ್ನು ಸ್ವೀಕರಿಸಲು ಸತತವಾಗಿ ವಿಫಲನಾದ ಅಥವಾ ಗೊತ್ತುಪಡಿಸಿದ ಅವಧಿಯೊಳಗೆ ಸೇವೆಯನ್ನು ಒದಗಿಸಲು ವಿಫಲನಾದ ಅಥವಾ ಸೇವೆಗಾಗಿಯ ಕೋರಿಕೆಯನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದ ಅಥವಾ ಮಿತಿಮೀರಿ ವಿಳಂಬ ಮಾಡಿದ ಯಾವುದೇ ಹೆಸರಿಸಲಾದ ಅಧಿಕಾರಿಯ ಸಂದರ್ಭದಲ್ಲಿ, ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥನು, ಈ ಬಗ್ಗೆ ಕಂಡುಬಂದ ಅಂಶಗಳನ್ನು ದಾಖಲಿಸಿದ ನಂತರ, ಮತ್ತು ಕಾರಣ ಕೇಳುವ ನೋಟೀಸನ್ನು ನೀಡಿ ಕರ್ತವ್ಯಲೋಪವೆಸಗಿದ ಅಧಿಕಾರಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದಾಗ ಮಾತ್ರ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಕ್ಷಮನಾಗಿರತಕ್ಕದ್ದು.

**ಪ್ರಕರಣ 16. ಅಧಿನಿಯಮದಡಿಯಲ್ಲಿ ವಿಲೆಯಾದ ಎಲ್ಲಾ ಪ್ರಕರಣಗಳ ದಾಖಲೆಗಳ ನಿರ್ವಹಣೆ:–** ಹೆಸರಿಸಲಾದ ಅಧಿಕಾರಿ, ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಗಳು ಅನುಕ್ರಮವಾಗಿ **ನಮೂನೆ–ಉ–1, ಉ–2, ಉ–3 ಗಳಲ್ಲಿ** ಎಲ್ಲಾ ಪ್ರಕರಣಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ವಿಶೇಷವಾಗಿ ಉ–1 ನಮೂನೆ ಪ್ರಕಾರ ವಿಳಂಬ ಹಾಗೂ ವಿಫಲತೆ ಪ್ರಕರಣಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನು ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥರಿಗೆ ನಿಯತಕಾಲಿಕ ವರದಿಯನ್ನು ಕಳುಹಿಸತಕ್ಕದ್ದು. 7 ಪ್ರಕರಣದಿಂದ ಹೆಚ್ಚು ವಿಳಂಬ/ವಿಫಲತೆಯನ್ನು ಹೊಂದಿರತಕ್ಕಂಥ ಸರ್ಕಾರಿ ನೌಕರರಿಗೆ ನಮೂನೆ ಉ–4 ರಂತೆ ಇ–ಮೇಲ್ ಮೂಲಕ ಕಾರಣ ಕೇಳುವ ನೋಟೀಸ್ ನೀಡತಕ್ಕದ್ದು. ಕಾರಣಗಳು ಸಮರ್ಪಕವಾಗದೆ ಇರುವ ಸಂದರ್ಭದಲ್ಲಿ ಶಿಸ್ತಿನ ಕ್ರಮ ಜರುಗಿಸುವುದು.

ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರ ತನ್ನ ಸಮಯ ಮಿತಿಯನ್ನು ಮೀರಿದ್ದರೆ, ನಮೂನೆ ಉ–5 ರಂತೆ ಇ–ಮೇಲ್ ಮೂಲಕ ಕಾರಣ ಕೇಳುವ ನೋಟೀಸ್ ನೀಡತಕ್ಕದ್ದು. ಇಂಥ ಪ್ರಕರಣಗಳನ್ನು ತಿಂಗಳ ಅಂತ್ಯಕ್ಕೆ ನಮೂನೆ ಉ–6ರಲ್ಲಿ ಸಿ.ಆ.ಸು.ಇಲಾಖೆಗೆ ವರದಿ ಮಾಡತಕ್ಕದ್ದು. ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥರು ಈ ಕ್ರಮವನ್ನು ತನ್ನ ವಾರ್ಷಿಕ ವರದಿಯಲ್ಲಿ ಸೇರಿಸತಕ್ಕದ್ದು. ವರ್ಷ ಅಂತ್ಯಕ್ಕೆ ಯಾವುದೇ ವಿಫಲರಾಗದೇ ಇರುವ ಅಧಿಕಾರಿಯ ಪಟ್ಟಿಯನ್ನು ಪ್ರಕಟಿಸಿ, ಪ್ರಶಂಸ ಪತ್ರ ನೀಡತಕ್ಕದ್ದು. (ನಮೂನೆ ಉ–7).

**ತಪ್ಪಿತಸ್ಥರಿಗೆ (ವಿಳಂಬವಾಗಿ ಸೇವೆ ನಿರ್ವಹಿಸುತ್ತಿರುವವರಿಗೆ) ಜಿಲ್ಲಾಧಿಕಾರಿಗಳು ಸಕಾಲ ಪೋರ್ಟ್‌ಲ್‌ನಿಂದ 'ಸ್ವಯಂ ಚಾಲಿತ' ಕಾರಣ ಕೇಳುವ ನೋಟಿಸನ್ನು ರವಾನಿಸುತ್ತಾರೆ. ಅವರಿಂದ ಸಮಜಾಯಿಷಿಯನ್ನು ಪಡೆಯುತ್ತಾರೆ ಹಾಗೂ ತಮ್ಮ ಆಡಳಿತದ ಅಧೀನದಲ್ಲಿರುವವರ ಬಗ್ಗೆ ವರದಿಯನ್ನು ಸಕಾಲ ಮಂಡಳಿಗೆ ಕಳುಹಿಸುತ್ತಾರೆ, ಇತರ ಇಲಾಖೆಗಳಿಗೆ ಸಂಬಂಧಿಸಿದಂತೆ, ಶಿಸ್ತು ಕ್ರಮವನ್ನು ಕೈಗೊಳ್ಳಲು ಪ್ರಧಾನ ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರು ಜವಾಬ್ದಾರರಾಗಿರುತ್ತಾರೆ.**

## 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳ ಶ್ರೇಯಾಂಕನ್ನು ರಾಜ್ಯ ನಕ್ಷೆಯಲ್ಲಿ ನಮೂದಿಸಲಾಗಿದೆ




Records shown above as on 28/07/2014 13:30:00

1. ಗುಲಾಬಿ: ಜಿಲ್ಲೆಗಳಲ್ಲಿ ಕಡಿಮೆ ಸಂಖ್ಯೆಯ ನಿರಂತರ ವಿಳಂಬ ಮಾಡುವ ಕಛೇರಿಗಳು
2. ಹಳದಿ: ಮಧ್ಯಮ ಪ್ರಮಾಣದ ನಿರಂತರ ವಿಳಂಬ ಮಾಡುವ ಕಛೇರಿಗಳು
3. ಹಸಿರು: ಗರಿಷ್ಠ ಪ್ರಮಾಣದ ನಿರಂತರ ವಿಳಂಬ ಮಾಡುವ ಕಛೇರಿಗಳು

ಟಿಪ್ಪಣಿ: ಜಿಲ್ಲೆಗಳಾದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಬೆಳಗಾಂ ಮತ್ತು ಬಳ್ಳಾರಿ ಮೊದಲ 5 ಶ್ರೇಯಾಂಕ ಪಡೆದಿದೆ, ಬೆಂಗಳೂರು ಮತ್ತು ಬೆಳಗಾಂ ಅರ್ಜಿ ಸ್ವೀಕೃತಿಯನ್ನು ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹೆಚ್ಚಿದೆ. ಕಂದಾಯ ಇಲಾಖೆಯ ವಿಳಂಬ ಮಾಡುವ ಕಛೇರಿಗಳು ರಾಜ್ಯದ್ಯಂತ ಹರಡಿವೆ, ಇದರ ಬಗ್ಗೆ ಜಿಲ್ಲಾಡಳಿತಾಧಿಕಾರಿಗಳು ನಿರಂತರವಾಗಿ ಹಲವು ಇಲಾಖೆಗಳ ಕಾರ್ಯ ನಿರ್ವಹಣೆ ಬಗ್ಗೆ ಮೇಲ್ವಿಚಾರಣೆ ಮಾಡಬೇಕಾದ ಅಗತ್ಯತೆ ಇದೆ.

# ಅಧ್ಯಾಯ 2 ಒ: ಇಲಾಖಾವಾರು 7 ಹಾಗೂ 7ಕ್ಕಿಂತ ಹೆಚ್ಚು ವಿಳಂಬ ಮಾಡಿರುವ ಕಛೇರಿಗಳ ಸಂಖ್ಯೆ

| ಕ್ರ ಸ | ಇಲಾಖೆ | ಇಲಾಖೆ/ಸಂಸ್ಥೆ | 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳ ಸಂಖ್ಯೆ (ಜೂನ್ '14) | 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳ ಸಂಖ್ಯೆ (ಜುಲೈ '14) |
|---|---|---|---|---|
| 1 | ಕಂದಾಯ ಇಲಾಖೆ | ಕಂದಾಯ ಇಲಾಖೆ | 517 | 466 |
| | | ಭೂ ಮೋಜಣಿ ಮತ್ತು ಭೂ ಕಂದಾಯ | 58 | 58 |
| | | ನೋಂದಣಿ ಮತ್ತು ಮುದ್ರಾಂಕ ಇಲಾಖೆ | 92 | 48 |
| 2 | ಒಳಾಡಳತ ಇಲಾಖೆ | ಒಳಾಡಳತ ಇಲಾಖೆ | 116 | 96 |
| 3 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 44 | 68 |
| 4 | ನಗರಾಭಿವೃದ್ಧಿ | ಬೃಹತ್ ಬೆಂಗಳೂರು ಮಹಾನಗರಪಾಲಿಕೆ | 19 | 15 |
| | | ನಗರ ಪಾಲಿಕೆ/ಪೌರ ನಿಗಮಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) | 5 | 5 |
| | | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 4 | 4 |
| | | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 2 | 2 |
| | | ಪಟ್ಟಣ ಪುರಸಭಾ ಪರಿಷತ್ತು | 17 | 11 |
| | | ನಗರ ಪುರಸಭಾ ಪರಿಷತ್ತು | 10 | 7 |
| | | ಪಟ್ಟಣ ಪಂಚಾಯತ್ | 6 | 12 |
| 5 | ಆರ್ಥಿಕ ಇಲಾಖೆ | ವಾಣಿಜ್ಯ ತೆರಿಗೆ ಇಲಾಖೆ | 7 | 3 |
| 6 | ಶಿಕ್ಷಣ ಇಲಾಖೆ | .ಸಾರ್ವಜನಿಕ ಶಿಕ್ಷಣ ಇಲಾಖೆ | 38 | 27 |
| | | ಪದವಿ ಪೂರ್ವ ಶಿಕ್ಷಣ | 1 | 1 |
| | | ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗ | 1 | 0 |
| | | ಉನ್ನತ ಶಿಕ್ಷಣ | 0 | 1 |
| | | ಆಯುಕ್ತಾಲಯ ಬೆಂಗಳೂರು ಹಾಗೂ ಮೈಸೂರು, ಸಿ ಪಿ ಐ | 2 | 2 |
| 7 | ಸಾರಿಗೆ ಇಲಾಖೆ | ಸಾರಿಗೆ ಇಲಾಖೆ | 37 | 35 |
| | | ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 3 | 15 |
| | | ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 0 | 5 |
| | | ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 1 | 8 |
| 8 | ಸಹಕಾರ ಇಲಾಖೆ | ಸಹಕಾರ ಸಂಘಗಳ ನೋಂದಣಾಧಿಕಾರಿಗಳು | 1 | 1 |
| | | ಕೃಷಿ ಉತ್ಪಾದನೆಗಳ ಮಾರುಕಟ್ಟೆ ಇಲಾಖೆ | 2 | 0 |
| 9 | ಕಾರ್ಮಿಕ ಇಲಾಖೆ | ಕಾರ್ಮಿಕ ಇಲಾಖೆ | 6 | 2 |
| | | ರಾಜ್ಯ ನೌಕರರ ವಿಮಾ ನಿಗಮ | 0 | 0 |
| | | ಬಾಯ್ಲರ್ ಕಾರ್ಖನೆ ಮತ್ತು ಅವುಗಳ ಸುರಕ್ಷತೆ | 0 | 0 |
| 10 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 7 | 16 |
| | ವಾಣಿಜ್ಯ ಮತ್ತು ಕೈಗಾರಿಕೆ | ವಾಣಿಜ್ಯ ಮತ್ತು ಕೈಗಾರಿಕೆ | 2 | 0 |
| 11 | ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 5 | 6 |
| 12 | ಸಿಬ್ಬಂದಿ ಮತ್ತು ಆಡಳತ ಸುಧಾರಣೆ ಇಲಾಖೆ | ಸಿಬ್ಬಂದಿ ಮತ್ತು ಆಡಳತ ಸುಧಾರಣೆ ಇಲಾಖೆ | 1 | 1 |
| 13 | ಕರ್ನಾಟಕ ಗೃಹ ಮಂಡಳಿ | ಕರ್ನಾಟಕ ಗೃಹ ಮಂಡಳಿ | 1 | 0 |
| 14 | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | 0 | 6 |
| 15 | ಆಹಾರ ಮತ್ತು ನಾಗರಿಕರ ಸರಬರಾಜು | ಆಹಾರ ಮತ್ತು ನಾಗರಿಕರ ಸರಬರಾಜು | 0 | 3 |
| 16 | ಔಷಧಗಳ ನಿಯಂತ್ರಣ ಇಲಾಖೆ | ಔಷಧಗಳ ನಿಯಂತ್ರಣ ಇಲಾಖೆ | 0 | 1 |
| 17 | ತೋಟಗಾರಿಕೆ ಇಲಾಖೆ | ರೇಷ್ಮೇ ಇಲಾಖೆ | 1 | 0 |
| | Total | | 1006 | 925 |

Records shown above as on 28/07/2014 13:30:00

ಟಿಪ್ಪಣಿ: ಕೇಂದ್ರ ಕಂದಾಯ ಇಲಾಖೆಯಲ್ಲಿ 466 ಕಛೇರಿಗಳಲ್ಲಿ 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡುತ್ತಿರುವ ಪ್ರಕ್ರಿಯೆಯು ಕಂಡು ಬಂದಿದೆ. ಇದರಲ್ಲಿ 48 ಕಛೇರಿಗಳು ಭೂ ಕಂದಾಯ ಇಲಾಖೆಯದು ಹಾಗೂ 58 ಕಛೇರಿಗಳು ಭೂ ಮಾಪನ ಇಲಾಖೆಯದಾಗಿದೆ ಇವೆಲ್ಲವು ಒಟ್ಟು ಗೂಡಿ ಒಟ್ಟು ನಿರಂತರ ವಿಳಂಬ ಮಾಡುವ ಸಂಖ್ಯೆ 572 ಆಗಿದೆ. ಇವುಗಳ ಪಾಲು ರಾಜ್ಯದ ಸರಾಸರಿಯ 62% ಇದೆ.


# ಅಧ್ಯಾಯ 2 ಓ :ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಶ್ರೇಯಾಂಕ


| ಜಿಲ್ಲೆ | | ದೂರುಗಳು | | | | ಸೈಬರ್ ಕೇಂದ್ರ | | ಸಹಾಯ ಕೇಂದ್ರ | | | | ನಾಗರಿಕರ ಪ್ರತಿಕ್ರಿಯೆ | | ಶ್ರೇಯಾಂಕಗಳ ಮೊತ್ತ | ಅಂತಿಮ ಶ್ರೇಯಾಂಕ |
|---|---|---|---|---|---|---|---|---|---|---|---|---|---|---|---|
| | ಜಿಲ್ಲೆಯ ಶ್ರೇಯಾಂಕ | ಸಕಾಲ – ಪರಿಹರಿಸಲ್ಪಟ್ಟ ಸಂಖ್ಯೆ | ಸಕಾಲ – ಶ್ರೇಯಾಂಕ | ಸಕಾಲೇತರ – ಪರಿಹರಿಸಿರುವ ಪ್ರಮಾಣ | ಸಕಾಲೇತರ–ಶ್ರೇಯಾಂಕ | ಎಂಒ ಸಹಿಗೊಂಡವುಗಳ | ಶ್ರೇಯಾಂಕ | ನಿಯೋಜಿಸಲ್ಪಟ್ಟ % | ಶ್ರೇಯಾಂಕ | ಪ್ರತಿಕ್ರಿಯೆ ಕಲೆಹಾಕಿರುವ ಪ್ರಮಾಣ | ಶ್ರೇಯಾಂಕ | ಕಲೆ ಹಾಕಿರುವುದು | ಶ್ರೇಯಾಂಕ | | |
| ಕೊಪ್ಪಳ | 4 | 100 | 1 | 100.00 | 1 | 34 | 15 | 40.0 | 10 | 40.01 | 5 | 58 | 7 | 43 | **1** |
| ಚಿತ್ರದುರ್ಗ | 9 | 100 | 1 | 100.00 | 1 | 17 | 21 | 42.8 | 9 | 74.02 | 2 | 80 | 3 | 46 | **2** |
| ಬೆಳಗಾಂ | 25 | 96.15 | 6 | 95.97 | 6 | 115 | 1 | 90.9 | 2 | 92.41 | 1 | 56 | 8 | 49 | **3** |
| ಶಿವಮೊಗ್ಗ | 14 | 97.18 | 4 | 97.92 | 2 | 56 | 9 | 0.0 | 14 | 33.27 | 6 | 53 | 9 | 58 | **4** |
| ಧಾರವಾಡ | 22 | 83.87 | 12 | 96.15 | 5 | 110 | 2 | 33.3 | 12 | 66.05 | 3 | 80 | 3 | 59 | **5** |
| ಉತ್ತರ ಕನ್ನಡ | 10 | 100 | 1 | 100.00 | 1 | 33 | 16 | 0.0 | 14 | 91.83 | 1 | 30 | 16 | 59 | **5** |
| ಗದಗ | 5 | 98.08 | 3 | 100.00 | 1 | 11 | 22 | 16.6 | 13 | 31.20 | 7 | 32 | 15 | 66 | **6** |
| ಬಿಜಾಪುರ | 16 | 91.25 | 11 | 95.95 | 7 | 60 | 7 | 66.6 | 6 | 4.70 | 22 | 85 | 1 | 70 | **7** |
| ಚಿಕ್ಕಬಳ್ಳಾಪುರ | 1 | 95.33 | 7 | 97.52 | 3 | 8 | 23 | 100.0 | 1 | 6.88 | 21 | 33 | 14 | 70 | **7** |
| ಬೆಂಗಳೂರು | 12 | 0.00 | 15 | 0.00 | 15 | 56 | 9 | 0.0 | 14 | 31.18 | 7 | 78 | 4 | 76 | **8** |
| ಚಾಮರಾಜನಗರ | 15 | 100 | 1 | 97.30 | 4 | 23 | 20 | 80.0 | 4 | 20.27 | 15 | 0 | 17 | 76 | **8** |
| ಗುಲ್ಬರ್ಗ | 30 | 95.24 | 8 | 92.59 | 9 | 92 | 3 | 87.5 | 3 | 18.24 | 18 | 60 | 5 | 76 | **8** |
| ಕೋಲಾರ | 8 | 95.10 | 9 | 71.95 | 10 | 32 | 17 | 0.0 | 14 | 20.04 | 16 | 85 | 2 | 76 | **8** |
| ತುಮಕೂರು | 2 | 0.00 | 15 | 0.00 | 15 | 82 | 5 | 63.6 | 7 | 11.70 | 20 | 0 | 17 | 81 | **9** |
| ಹಾವೇರಿ | 20 | 100.00 | 1 | 100.00 | 1 | 26 | 19 | 50.0 | 8 | 18.69 | 17 | 30 | 16 | 82 | **10** |
| ಬಳ್ಳಾರಿ | 28 | 97.16 | 5 | 100.00 | 1 | 23 | 20 | 75.0 | 5 | 30.27 | 8 | 30 | 16 | 83 | **11** |
| ಹಾಸನ | 3 | 0.00 | 15 | 0.00 | 15 | 38 | 14 | 0.0 | 14 | 24.28 | 11 | 0 | 17 | 89 | **12** |
| ಬಾಗಲಕೋಟೆ | 18 | 0.00 | 15 | 0.00 | 15 | 59 | 8 | 0.0 | 14 | 47.76 | 4 | 0 | 17 | 91 | **13** |
| ಚಿಕ್ಕಮಗಳೂರು | 11 | 100.00 | 1 | 93.02 | 8 | 0 | 25 | 37.5 | 11 | 3.83 | 23 | 40 | 12 | 91 | **13** |
| ಯಾದಗಿರಿ | 23 | 98.96 | 2 | 60.81 | 12 | 30 | 18 | 0.0 | 14 | 21.00 | 14 | 48 | 10 | 93 | **14** |
| ಉಡುಪಿ | 24 | 0.00 | 15 | 100.00 | 1 | 47 | 11 | 0.0 | 14 | 23.43 | 12 | 0 | 17 | 94 | **15** |
| ಮಂಡ್ಯ | 7 | 20.00 | 14 | 0.00 | 14 | 17 | 21 | 0.0 | 14 | 17.31 | 19 | 59 | 6 | 95 | **16** |
| ರಾಮನಗರ | 6 | 0.00 | 15 | 0.00 | 15 | 26 | 19 | 0.0 | 14 | 28.57 | 9 | 0 | 17 | 95 | **16** |
| ದಾವಣಗೆರೆ | 17 | 0.00 | 15 | 0.00 | 15 | 64 | 6 | 0.0 | 14 | 21.55 | 13 | 0 | 17 | 97 | **17** |
| ರಾಯಚೂರು | 13 | 0.00 | 15 | 0.00 | 15 | 46 | 12 | 0.0 | 14 | 24.43 | 11 | 0 | 17 | 97 | **17** |
| ಮೈಸೂರು | 26 | 0.00 | 15 | 0.00 | 15 | 51 | 10 | 0.0 | 14 | 28.08 | 10 | 0 | 17 | 107 | **18** |
| ದಕ್ಷಿಣ ಕನ್ನಡ | 21 | 94.20 | 10 | 20.28 | 13 | 39 | 13 | 0.0 | 14 | 0.00 | 24 | 34 | 13 | 108 | **19** |
| ಬೆಂಗಳೂರು ಗ್ರಾಮಾಂತರ | 27 | 0.00 | 15 | 0.00 | 15 | 56 | 9 | 0.0 | 14 | 21.56 | 13 | 0 | 17 | 110 | **20** |
| ಬೀದರ್ | 29 | 0.00 | 15 | 0.00 | 15 | 88 | 4 | 0.0 | 14 | 11.63 | 20 | 0 | 17 | 114 | **21** |
| ಕೊಡಗು | 19 | 77.78 | 13 | 66.67 | 11 | 3 | 24 | 0.0 | 14 | 0.00 | 24 | 41 | 11 | 116 | **22** |
| **Total** | | | | | | **1342** | | | | | | **1012** | | | |


**Records shown above as on 30/07/2014 15:30:00**

# ಅಧ್ಯಾಯ ೩ಅ: ಕರೆ ಕೇಂದ್ರದ ವರದಿ

ಕರೆಕೇಂದ್ರದ ಕೇಂದ್ರವು(ಸಂಖ್ಯೆ ೦೮೦-೪೪೫೫೪೪೫೫) ನಾಗರಿಕರು ಸಂಪರ್ಕಿಸಬಹುದಾದ_ಏಕಗಾವಾಕ್ಷಿಯಾಗಿದೆ, ಇದುವರೆಗೆ ಒಟ್ಟಾರೆ 768146 ಕರೆಗಳು ದಾಖಲಾಗಿದೆ. ಈ ಮಾಹೆಯಲ್ಲಿ ಒಟ್ಟು ೩೯೨೯೨ ಕರೆಗಳು ಸ್ವೀಕೃತವಾಗಿವೆ. ಕರೆ ಮಾಡುವ ನಾಗರಿಕರಿಗೆ ಅಧಿನಿಯಮದ ಬಗ್ಗೆ, ಸೇವೆ ಪಡೆಯುವ ಮಾಹಿತಿ ಬಗ್ಗೆ ಇನ್ನಿತರೆ ಸಕಾಲ ಅಧಿನಿಯಮದ ವಿಷಯಗಳನ್ನು ಕರೆಕೇಂದ್ರ ತಿಳಿಸುತ್ತದೆ. ಕರೆಕೇಂದ್ರದ ಒಳಕರೆಗಳ ಸಂಕ್ಷಿಪ್ತ ವಿವರ ಈ ಕೆಳಗಿನ ನಕ್ಷೆಯಂತಿದೆ.



## ಅಧ್ಯಾಯ 3ಅ: ಇಲಾಖಾವಾರು ಒಳಕರೆಗಳ ಸ್ವೀಕೃತಿ ವಿವರ (ಪ್ರವೃತ್ತಿ)

ಈ ಮಾಹೆಯ ಇಲಾಖಾವಾರು ಒಳಕರೆಗಳ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ.

| ಇಲಾಖೆ | ಕರೆ ಸಂಖ್ಯೆ |
|---|---|
| ಕಂದಾಯ ಇಲಾಖೆ | 23521 |
| ನಗರಾಭಿವೃದ್ಧಿ | 3676 |
| ಸಾರಿಗೆ ಇಲಾಖೆ | 3037 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 2469 |
| ಲೋಕೋಪಯೋಗಿ ಇಲಾಖೆ | 1854 |
| ಶಿಕ್ಷಣ ಇಲಾಖೆ | 920 |
| ಮಹಿಳೆ ಮತ್ತು ಮಕ್ಕಳ ಕಲ್ಯಾಣ | 892 |
| ಒಳಾಡಳಿತ ಇಲಾಖೆ | 622 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 426 |
| ಕಾರ್ಮಿಕ ಇಲಾಖೆ | 424 |
| ವಾಣಿಜ್ಯ ತೆರಿಗೆ ಇಲಾಖೆ | 225 |
| ಆಹಾರ ಮತ್ತು ನಾಗರಿಕ ಸರಬರಾಜು | 147 |
| ಸಹಕಾರ ಇಲಾಖೆ | 144 |
| ಪದವಿ ಪೂರ್ವ ಶಿಕ್ಷಣ | 63 |
| ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ | 33 |
| ಕೃಷಿ ಇಲಾಖೆ | 30 |
| ಜಲಸಂಪನ್ಮೂಲ | 27 |
| ವಸತಿ | 17 |
| ಐಡಿಡಿ | 16 |
| ನಗರ ಪುರಸಭಾ ಪರಿಷತ್ತು | 15 |
| ಅರಣ್ಯ | 15 |
| ಬೃಹತ್ ಬೆಂಗಳೂರು ಮಹಾನಗರಪಾಲಿಕೆ | 12 |
| ಸಾರಿಗೆ ಕಾರ್ಪೋರೇಷನ್ | 10 |
| ಡಿಪಿಎ | 7 |
| ಮೀನುಗಾರಿಕೆ | 7 |
| ಕನ್ನಡ ಮತ್ತು ಸಂಸ್ಕೃತಿ | 7 |
| ನಗರ ಪಾಲಿಕೆ/ಪೌರ ನಿಗಮಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) | 6 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 5 |
| ವಾಣಿಜ್ಯ ಮತ್ತು ಕೈಗಾರಿಕೆ | 4 |
| ಪರಿಸರ ವಿಜ್ಞಾನ | 3 |
| ಪಾರ್ಲಿಮೆಂಟರಿ ಅಫೇರ್ಸ್ | 3 |
| ಯುವಜನ ಕ್ರೀಡೆ | 3 |
| ವೈದಕೀಯ ಶಿಕ್ಷಣ | 3 |
| ನೀರಾವರಿ ಇಲಾಖೆ | 2 |
| ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1 |
| ಪಟ್ಟಣ ಪುರಸಭಾ ಪರಿಷತ್ತು | 1 |
| ಯೋಜನೆ ಮತ್ತು ಸಾಂಖ್ಯಿಕ ಇಲಾಖೆ | 1 |
| ಇ ಎಸ್ ಐ | 1 |
| ವಿಶ್ವವಿದ್ಯಾನಿಲಯ ಪರೀಕ್ಷಾಂಗ ವಿಭಾಗ | 1 |
| ಒಟ್ಟು | **39292** |

**Records shown above as on 30/07/2014 12:30:00**

## ಅಧ್ಯಾಯ ३ಆ: ಮಾಹೆಯ – ಸಕಾಲ ಹಾಗೂ ಸಕಾಲೇತರ ದೂರುಗಳ ಸ್ಥಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ

| ಸಲ್ಲಿಸಿರುವ ಕ್ರಮ | ದೂರುಗಳ ವರ್ಗ | ಒಟ್ಟಾರೆ ಸ್ವೀಕೃತಿ | ಪರಿಹರಿಸಲ್ಪಟ್ಟ ದೂರುಗಳು | ತಿರಸ್ಕೃತ | ಒಟ್ಟಾರೆ ವಿಲೇವಾರಿ | ಪರಿಹಾರದ ಹಂತದಲ್ಲಿರುವ ದೂರುಗಳು | ಬಾಕಿ |
|---|---|---|---|---|---|---|---|
| ಮುಖ್ಯ ಮಂತ್ರಿಗಳ ಜನತಾ ದರ್ಶನ | ಸಕಾಲೇತರ | 3026 | 1992 | 610 | 2602 | 0 | 424 |
| **ಸಕಾಲ ಕರೆಕೇಂದ್ರ** | **ಸಕಾಲ** | 3648 | 3482 | 69 | 3551 | 73 | 24 |
| **ಸಕಾಲ ಕರೆಕೇಂದ್ರ** | ಸಕಾಲೇತರ | 2769 | 2693 | 18 | 2711 | 54 | 1 |
| **ಇ–ಮೇಲ್** | **ಸಕಾಲ** | 221 | 213 | 8 | 221 | 0 | 0 |
| **ಇ–ಮೇಲ್** | ಸಕಾಲೇತರ | 452 | 442 | 9 | 451 | 1 | 0 |
| ಇ ಜನಸ್ಪಂದನ | ಸಕಾಲೇತರ | 5172 | 1051 | 649 | 1700 | 229 | 3246 |
| ಜನಾಗ್ರಹ | ಸಕಾಲೇತರ | 3075 | 1400 | 31 | 1431 | 0 | 1644 |
| **ಆನ್‌ಲೈನ್** | **ಸಕಾಲ** | 817 | 442 | 186 | 628 | 66 | 123 |
| **ಆನ್‌ಲೈನ್** | ಸಕಾಲೇತರ | 152 | 78 | 8 | 86 | 44 | 22 |
|  | **ಒಟ್ಟು** | **19332** | **11793** | **1588** | **13381** | **467** | **5484** |

| ಕುಂದುಕೊರತೆಗಳು | ದೂರುಗಳ ವರ್ಗ | ಒಟ್ಟಾರೆ ಸ್ವೀಕೃತಿ | ಪರಿಹರಿಸಲ್ಪಟ್ಟ ದೂರುಗಳು | ತಿರಸ್ಕೃತ | ಒಟ್ಟಾರೆ ವಿಲೇವಾರಿ | ಪರಿಹಾರದ ಹಂತದಲ್ಲಿರುವ ದೂರುಗಳು | ಬಾಕಿ |
|---|---|---|---|---|---|---|---|
|  | **ಸಕಾಲ** | 4686 | 4137 | 263 | 4400 | 139 | 147 |
|  | ಸಕಾಲೇತರ | 14646 | 7656 | 1325 | 8981 | 328 | 5337 |

**Records shown above as on 28/07/2014 11:30:00**

**Legend:**

| | |
|---|---|
| ನಿವಾರಣೆ : ದೂರುಗಳು ನಿವಾರಣೆಯಾಗಿದೆ, ವಿಲೇವಾರಿ ಸರಿಯಾದ ಸಮಯದಲ್ಲಿ ತಲುಪಿದೆ ಅಥವಾ ವಿಳಂಬಗೊಂಡಿದೆ, | ತಿರಸ್ಕೃತ – ದೂರುಗಳು ತಿರಸ್ಕೃತವಾಗಿವೆ, ಕಾರಣ ಸರಿಯಾದ ಮಾಹಿತಿ ಅಥವಾ ದಾಖಲೆಗಳು ಇಲ್ಲದ ಕಾರಣ. |
| ಪರಿಹಾರದ ಹಂತದಲ್ಲಿದೆ : ದೂರುಗಳು ನಿರ್ವಹಣೆಯಾಗಿದೆ ಪರಿಹಾರದ ಹಂತದಲ್ಲಿದೆ (ದಿನವಾರು ನಿಗದಿತ ಕಾಲ ನಿರ್ವಹಣೆಯನ್ನು ಮೀರಿಲ್ಲ) | **ವಿಳಂಬ ವಿಲೇ:** ದೂರುಗಳು /ಕುಂದುಕೊರತೆಗಳು ಪರಿಹಾರದ ಹಂತದಲ್ಲಿವೆ ಆದರೆ ಪರಿಹರಿಸಲು ಇನ್ನೂ ಸಮಯ ಇದೆ (ಸಮಯಮಿತಿಯಲ್ಲಿ ಕಾರ್ಯ ನಿರ್ವಹಣೆಯಾಗುತ್ತಿದೆ.) |

ಸಕಾಲದಡಿ ಒಟ್ಟಾರೆ 4686 ದೂರುಗಳು ದಾಖಲಾಗಿದ್ದು 4137 ದೂರಗಳನ್ನು ಪರಿಹರಿಸಲಾಗಿದ್ದು, 263 ವಿವಿಧ ಕಾರಣದಿಂದ ತಿರಸ್ಕೃತವಾಗಿದ್ದು, 139 ಪರಿಹಾರದ ಹಂತದಲ್ಲಿದ್ದು 147 ದೂರುಗಳು ಬಾಕಿ ಇದೆ.

ಪರಿಹರಿಸಲ್ಪಟ್ಟ ದೂರುಗಳ ಪ್ರಮಾಣ 93%.

ಸಕಾಲೇತರ ದೂರಗಳ ವರ್ಗದಲ್ಲಿ 14646 ದಾಖಲಾಗಿದ್ದು, 7656 ದೂರುಗಳನ್ನು ಪರಿಹರಿಸಲಾಗಿದ್ದು, 1325 ತಿರಸ್ಕೃತವಾಗಿದ್ದು, ಒಟ್ಟಾರೆ 8981 ದೂರುಗಳು ಪರಿಹಾರವನ್ನು ಪಡೆದಿದೆ, 5337 ದೂರುಗಳು ಬಾಕಿ ಇದೆ. ದೂರು ಪರಿಹರಿಸಲ್ಪಟ್ಟ ಪ್ರಮಾಣ 62% ಇದೆ. 328 ದೂರುಗಳು ಪರಿಹಾರದ ಹಂತದಲ್ಲಿದೆ. ಜನಗ್ರಹ ದೂರುಗಳ ನಿರ್ವಹಣೆ ಇತ್ತೀಚಿನ ದಿನಗಳಂದಷ್ಟೆ ನಿರ್ವಹಿಸಲು ಶುರು ಮಾಡಿದ್ದರಿಂದ ದೂರು ಬಾಕಿ ಸಂಖ್ಯೆ ಹೆಚ್ಚಿದೆ.

ಇಲಾಖೆಗಳನ್ನು ಕೋರುವುದೆನೆಂದರೆ ಸಕಾಲ ದೂರುಗಳಗಷ್ಟೆ ಮಹತ್ವ ಕೊಡದೆ ಸಕಲೇತರ ದೂರುಗಳ ನಿರ್ವಹಣೆ ಬಗ್ಗೆ ಕೂಡ ತ್ವರಿತವಾಗಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

## ಅಧ್ಯಾಯ ೩ಇ: **ಪರಿಹಾರ ಧನ ವಿವರ**

| ಕ್ರ ಸಂ | ಇಲಾಖೆ | ಅಹವಾಲು ಸಂಖ್ಯೆ | ಪರಿಹಾರ ಧನ ಮೊತ್ತ |
|---|---|---|---|
| 1 | ಕಂದಾಯ ಇಲಾಖೆ | 365 | 49340 |
| 2 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 27 | 3040 |
| 3 | ಭೂಮಾಪನ ಮತ್ತು ಭೂ ಕಂದಾಯ ಇಲಾಖೆ | 25 | 1900 |
| 4 | ಸಾರ್ವಜನಿಕ ಶಿಕ್ಷಣ | 25 | 4620 |
| 5 | ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ | 17 | 1600 |
| 6 | ಒಳಾಡಳಿತ ಇಲಾಖೆ | 4 | 380 |
| 7 | ವಾಣಿಜ್ಯ ತೆರಿಗೆ ಇಲಾಖೆ | 3 | 260 |
| 8 | ಸಾರಿಗೆ ಇಲಾಖೆ | 2 | 640 |
| 9 | ಆಹಾರ ಮತ್ತು ನಾಗರಿಕ ಸರಬರಾಜು | 1 | 60 |
| 10 | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1 | 20 |
| 11 | ನಗರ ಸಭೆ | 1 | 320 |
| | ಒಟ್ಟು | **471** | **62180** |

**Records shown above as on 28/08/2014 11:30:00**

**ದೂರುಗಳು / ಫಲಿತಾಂಶ**

**ದಿನಾಂಕ:** 08/07/2014

**ಹೆಸರು:** ಧರ್ಮೇಂದ್ರ ಸನ್ ಆಫ್ ಸಿದ್ಧರಾಮು

**ಸ್ಥಳ:** ಚಾಮರಾಜನಗರ

**ಇಲಾಖೆ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

**ಸೇವೆ:** ಗ್ರಾಮ ನೈರ್ಮಲೀಕರಣ

**ದೂರು ಬಂದ ರಹದಾರಿ:** ಕರೆ ಕೇಂದ್ರ

**ವಿವರ:** PR0011001437491 ಹಾಗೂ 1ನೇ ಮೇಲ್ಮನವಿಯಲ್ಲಿ ತಪ್ಪು. ಇದನ್ನು ಇಲಾಖೆಯು ಅನುಮೋದಿಸಿದೆ.





ಪಂಚಾಯತಿ ಅಭಿವೃದ್ಧಿ ಅಧಿಕಾರಿ

# 3ಈ. ನಾಗರಿಕರ ಮರುಸ್ಪಂದನೆ




FD0012001053634;
ಮಹಮೂದ ಜಮಾದಾರ,
ಉತ್ತರ ಕನ್ನಡ,
ನಗರಾಭಿವೃದ್ಧಿ ಇಲಾಖೆಯ ಸೇವೆಗಾಗಿ ಕೋರಿದ್ದರು.

ಅರ್ಜಿದಾರರು ನಿಗದಿತ ಸಮಯದಲ್ಲಿ ಸೇವೆ ಪಡೆದು ಕೊಂಡಿದ್ದಾರೆ, ಸೇವೆ ಬೇಗನೇ ದೊರೆತಿರುವ ಬಗ್ಗೆ ಖುಷಿ ಇರುವುದಾಗಿ ತಿಳಿಸಿದರು, ಸಕಾಲ ಯೋಜನೆ ಬಗ್ಗೆ ಮಾಹಿತಿ ಇರುವುದಾಗಿ ತಿಳಿಸಿದರು, ಇದೊಂದು ಉತ್ತಮ ಯೋಜನೆ ಯಾಗಿದ್ದು, ಸಾರ್ವಜನಿಕರಿಗೆ ಹೆಚ್ಚಿನ ಪ್ರಂ ಯೋಜನೆ ಪಡೆಯಬಹುದಾಗಿದೆ ಎಂದು ಅಭಿಪ್ರಾಯವನ್ನು ತಿಳಿಸಿದರು. ಇದೊಂದು ಉತ್ತಮ ಯೋಜನೆ ಯಾಗಿದೆ ಎಂದು ತಿಳಿಸಿದರು. ಧನ್ಯವಾದಗಳನ್ನು ತಿಳಿಸಿದರು. ದೂರವಾಣಿ ಮುಖಾಂತರ ಸದರೀಯವರ ಸೇವೆ ಬಗ್ಗೆ ವಿಚಾರಿಸಿದಕ್ಕೆ ಧನ್ಯವಾದಗಳನ್ನು ತಿಳಿಸಿದರು.



FD0012001053710,
ಭಾರತಿ ಗುರುಲಿಂಗಯ್ಯ,
ಬೆಳಗಾಂ
ತಹಸಿಲ್ದಾರ್ ಕಛೇರಿಯಲ್ಲ ಸೇವೆಗಾಗಿ ಕೋರಿದ್ದರು

ಅರ್ಜಿದಾರರು ನಿಗದಿತ ಸಮಯದಲ್ಲಿ ಸೇವೆ ಪಡೆದು ಕೊಂಡಿದ್ದಾರೆ, ಸೇವೆ ಬೇಗನೇ ದೊರೆತಿರುವ ಬಗ್ಗೆ ಖುಷಿ ಇರುವುದಾಗಿ ತಿಳಿಸಿದರು, ಸಕಾಲ ಯೋಜನೆಬಗ್ಗೆ ಮಾಹಿತಿ ಇರುವುದಾಗಿ ತಿಳಿಸಿದರು ಸಾರ್ವಜನಿಕರಿಗೆ ಸರ್ಕಾರದ ಸೇವೆಗಳನ್ನು ಪಡೆಯಲು ಸುಲಭವಾಗಿದೆ ,ಉತ್ತಮ ಸೇವೆ ಇದಆಗಿದೆ ಎಂದು ತಮ್ಮ ಅಭಿಪ್ರಾಯ ವನ್ನು ತಿಳಿಸಿದರು,, ದೂರವಾಣಿ ಮುಖಾಂತರ ಸದರೀಯವರ ಸೇವೆ ಬಗ್ಗೆ ವಿಚಾರಿಸಿದಕ್ಕೆ ಧನ್ಯವಾದಗಳನ್ನು ತಿಳಿಸಿದರು.




SS೦೯೯೦೦೦೦೬೦೯೩೫೩

ನರಸಿಂಹಪ್ಪ,

ಹೊಳಲ್ಕೆರೆ,

ಸರ್ವೆ ಇಲಾಖೆ ತಾಲ್ಲೋಕು ಆಫೀಸ್,

ಡ್ಯೂಪ್ಲೀಕೇಟ್ ಕಾಪಿ ಆಕಾರ ಬಂದು ಹೊಳಲ್ಕೆರೆ, ೭ ದಿನ ಬೇಕು ಅಂತ ಹೇಳಿದ್ದರು ನಾನು ಸಾರ್ ದಿನ ಬರುವುದ್ದಕ್ಕೆ ಆಗುವುದಿಲ್ಲ ಇವತ್ತೆ ಕೊಡಿ ಸಾರ್ ಎಂದು ಕೇಳಿದೆ ಮದ್ಯಾಹ್ನ ಬನ್ನಿ ಎಂದರು,ಮದ್ಯಾಹ್ನ ಹೋಗಿ ತೆಗೆದು ಕೊಂಡು ಬಂದೆನು.




RD0038531021839

ಸಂಗೀತ

ಟಿ ಎಮ್ಮಿಗನೂರು,

ಹೊಳಲ್ಕೆರೆ,

ಜಾತಿ ಪ್ರಮಾಣ ಪತ್ರ ಕ್ಕೆ ಕೋರಿದೆ, ನಾಡ ಕಛೇರಿ ತಾಳ್ಯದಲ್ಲಿ ಒಂದು ವಾರದಲ್ಲಿ ಸಿಕ್ಕಿದೆ ಸಾರ್ ಸಕಾಲ ಬಂದರಿಂದ ಕೆಲಸಗಳು ಬೇಗ ಆಗ್ತಿದೆ. ನಮ್ಮ ಅಣ್ಣ ಹೋಗಿ ತೆಗೆದು ಕೊಂಡು ಬಂದರು,ಬೇಗನೆ ಆಗುತ್ತಿವೆ, ಇದು ಒಳ್ಳೆಯ ಯೋಜನೆ ಆಗಿದೆ





PR0011001228276
ಎನ್ ರೇವಣಸಿದ್ದಪ್ಪ,

ಹೊಳಲ್ಕೆರೆ,

ಗ್ರಾಮ ಪಂಚಾಯಿತಿ ಹಿರೇ ಎಮ್ಮಿಗನೂರು,

ಬೀದಿ ದೀಪಕ್ಕೆ ಕೋರಿದ್ದೆ ಪಂಚಾಯಿತಿ ಗೆ ಹೋಗಿ ಪಿ ಡಿ ಓ ಗೆ ಸಾರ್ ನಮ್ಮೋರಿಗೆ ಬೀದಿ ದ್ವೀಪ ಹಾಕಿಸಿರಿ ಎಂದು ಎಂದು ಅರ್ಜಿ ಕಟ್ಟಿದ್ಮೆಲ್ಲಯಿತು ಹಾಕಿಸಿತ್ತಿವಿ ಅಂದರು ಇದುವರೆಗು ಹಾಕಿಸಿಲ್ಲ, ಮತ್ತೆ ಹೋಗಿ ಕೇಳಿದ್ದಕ್ಕೆ ನಾಳೇನೆ ಹಾಕಿಸಿತ್ತಿನಿ ಎಂದರು.



**L20990000652647,**
**ಎಲ್ ಎಸ್ ಪೂಜಾರಿ,**
**ಗೋಕಾಕ್,**
**ನಗರಸಭೆ ಸೇವೆಗಾಗಿ ಕೋರಿದ್ದರು.**
**ಅರ್ಜಿದಾರರು ನಿಗದಿತ ಸಮಯದಲ್ಲಿ ಸೇವೆ ಪಡೆದು ಕೊಂಡಿದ್ದಾರೆ, ಸೇವೆ ಬೇಗನೇ ದೊರೆತಿರುವ ಬಗ್ಗೆ ಖುಷಿ ಇರುವುದಾಗಿ ತಿಳಿಸಿದರು, (ಸಕಾಲ ಯೋಜನೆ ಯಡಿ ಬೇಗನೇ ದೊರೆ ತಿರುವುದು ಗೊತ್ತಿರಲಿಲ್ಲ.) ಸಂಕ್ಷಿಪ್ತ ಅಧಿನಿಯಮದ ವಿವರ ನೀಡಲಾಗಿದೆ. ಅರ್ಜಿದಾರ ಯಾವ ಮಧ್ಯವರ್ತಿಯ ಸಹಾಯವಿಲ್ಲದೇ ಸೇವೆ ಪಡೆದಿರುವುದಾಗಿ ತಿಳಿಸಿದ್ದು ಖುಷಿಯಾಗಿದೆಯೆಂದು ತಿಳಿಸಿದ್ದಾರೆ.**

# ಅಧ್ಯಾಯ – 4: ಘಟನಾವಳಿ ಮತ್ತು ಪತ್ರಿಕಾ ವರದಿಗಳ ಸಂಕಲನ

### 1. ಅಮೇರಿಕನ್ನಡೋತ್ಸವ ಮತ್ತು ಜಾಗತಿಕ ಬಂಡವಾಳ ಸಮಾವೇಶ

ಬೆಂಗಳೂರು, ಜುಲೈ 12: ಎನ್‌ಆರ್‌ಐಗಳಿಗೆ ವ್ಯಾಪಾರದಲ್ಲಿ ಹೂಡಿಕೆ ಮಾಡಲು ಕರ್ನಾಟಕದಲ್ಲಿ ವಿಪುಲ ಅವಕಾಶಗಳಿವೆ ಹಾಗೂ ಯುವ ಜನಾಂಗವು ಸರ್ಕಾರದ ಕಾರ್ಯಮಗಳಲ್ಲಿ ಪಾಲ್ಗೊಳ್ಳಲು ಸಕಾಲ ಯೋಜನೆಯಿಂದ ಸಾಧ್ಯವಾಗಿದೆ ಎಂದು ಸಾರಿಗೆ ಸಚಿವ ಶ್ರೀ ರಾಮಲಿಂಗರೆಡ್ಡಿ ತಿಳಿಸಿದರು.

ಅವರು ಇಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ **ನಾವಿಕ (ಅಮೇರಿಕಾ ವಿಶ್ವ ಕನ್ನಡ ಸಂಸ್ಥೆ) ವತಿಯಿಂದ ಏರ್ಪಡಿಸಲಾಗಿದ್ದ ಅಮೇರಿಕನ್ನಡೋತ್ಸವ ಮತ್ತು ಜಾಗತಿಕ ಬಂಡವಾಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು**.

ಎನ್‌ಆರ್‌ಐಗಳು ಭಾರತದಲ್ಲಿ ಹೂಡಿಕೆ ಮಾಡುವ ಮೂಲಕ ಯುವ ಜನಾಂಗಕ್ಕೆ ಉತ್ತಮ ಭವಿಷ್ಯವನ್ನು ರೂಪಿಸುವಂತೆ ಅವರು ಕರೆ ನೀಡಿದರು.



ಇದೇ ಸಂದರ್ಭದಲ್ಲಿ ಮಾತನಾಡಿದ ಡಿಪಿಎಆರ್, ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಡಾ: ಶಾಲಿನಿ ರಜನೀಶ್, ಸಕಾಲ ಕಾರ್ಯಕ್ರಮ ಮತ್ತು ಅದು ಕೈಗೊಂಡಿರುವ ಯೋಜನೆಗಳ ಬಗ್ಗೆ ವಿವರಿಸಿದರು.

ಕೇಂದ್ರ ಸರ್ಕಾರ ಶೀಘ್ರದಲ್ಲಿಯೇ ಜಾರಿಗೆ ತರಲಿರುವ ನಾಗರಿಕ ಹಕ್ಕು ಕಾಯಿದೆಯ ಬಗ್ಗೆ ಮಾತನಾಡಿದ ಅವರು, ಕಾಯಿದೆಯ ಮೂಲಕ ಸರ್ಕಾರಿ ಸೇವೆಗಳನ್ನು ಸಮಯಬದ್ದವಾಗಿ ಪಡೆಯಲು ಇದರಿಂದ ಸಾಧ್ಯವಾಗಲಿದೆ ಎಂದರು.

ಕರ್ನಾಟಕದಲ್ಲಿ 52 ಮಿಲಿಯನ್ ನಾಗರಿಕರನ್ನು ತಲುಪಿರುವ ಸಕಾಲ 50 ಇಲಾಖೆಗಳ , 669 ಸೇವೆಗಳನ್ನು ನೀಡುತ್ತಿದೆ ಎಂದರು. ಅಭಿವೃದ್ಧಿಶೀಲ ದೇಶಗಳಾದ ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿಯೂ ಈ ಬಗ್ಗೆ ಅಧ್ಯಯನ ನಡೆಸಿ ಯೋಜನೆಯನ್ನು ಆ ದೇಶಗಳಲ್ಲಿಯೂ ಜಾರಿಗೆ ತರಲಾಗಿದೆ ಎಂದರು.

ಐಐಟಿ, ಚೈನ್ನೈ ಹಾಗೂ ದೆಹಲಿ ಸ್ಕೂಲ್ ಆಫ್ ಇಕನಾಮಿಕ್ಸ್‌ನ ವಿದ್ಯಾರ್ಥಿಗಳು ಹಾಗೂ ಅಂತರರಾಷ್ಟ್ರೀಯ ವಿದ್ಯಾರ್ಥಿ ಸ್ವಯಂಸೇವಾ ಕಾರ್ಯಕ್ರಮದಡಿ ಯುಕೆ ಹಾಗೂ ಫ್ರೆಂಚ್ ದೇಶದ ವಿದ್ಯಾರ್ಥಿಗಳು ಸಕಾಲದ ಬಗ್ಗೆ ಆಸಕ್ತಿ ವಹಿಸಿರುವುದಾಗಿ ಅವರು ತಿಳಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಯುಕ್ತರಾದ ಶ್ರೀ ಮಹೇಶ್ವರ ರಾವ್ ಮಾತನಾಡಿ ಎನ್‌ಆರ್‌ಐಗಳು ಕರ್ನಾಟಕದಲ್ಲಿ ಬಂಡವಾಳ ಹೂಡಲು ಆಸಕ್ತಿ ವಹಿಸಿದ್ದಾರೆ ಎಂದರಲ್ಲದೆ, ಸಕಾಲದೊಡನೆ ಕೈ ಜೋಡಿಸಿ ಎನ್‌ಆರ್‌ಐ ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲು ಸಹಕರಿಸುವುದಾಗಿ ಬರವಸೆಯಿತ್ತರು.

ಕಾರ್ಯಕ್ರಮದಲ್ಲಿ ಎನ್‌ಆರ್‌ಐ ಆದ ಶ್ರೀ ಶಿವಪ್ರಕಾಶ್ ಮಾತನಾಡಿ ಬಂಡವಾಳ ಹೂಡಿಕೆಗೆ ಸರ್ಕಾರವು ಕೆಲವು ನೀತಿಗಳನ್ನು ಸುಧಾರಿಸಿದಲ್ಲಿ ಅನುಕೂಲವಾಗುವುದು ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಶ್ರೀ ಮುಖ್ಯಮಂತ್ರಿ ಚಂದ್ರು, ಕರ್ನಾಟಕ ಸರ್ಕಾರದ ಎನ್‌ಆರ್‌ಐ ಫೋರಂನ ಶ್ರೀ ವಿ.ಸಿ.ಪ್ರಕಾಶ್, ಡಾ:ಮುರಳೀಧರ್, ಶ್ರೀ ರಾಜನ್ ನಾರಾಯಣ್, ಮತ್ತಿತರ ಗಣ್ಯರು ಹಾಜರಿದ್ದರು.

**"ಲೆಟ್ ಅಸ್ ಆಕ್ಟ್ ಆನ್ ದಿ ಆಕ್ಟ್ಸ್"(LET US ACT ON THE ACTS)–** ಶಾಲಿನಿ ರಜನೀಶ್

ಬೆಂಗಳೂರು, ಜುಲೈ 16: ಕರ್ನಾಟಕ ಸರ್ಕಾರ ನಾಗರಿಕ ದೂರು ನಿವಾರಣೆಯಲ್ಲಿ ದೇಶದಲ್ಲೇ ಅತಿ ಉನ್ನತ ಹಾಗೂ ಸುಲಭ ವ್ಯವಸ್ಥೆಯನ್ನು ಕಲ್ಪಿಸಿದ ಹೆಗ್ಗಳಿಕೆಯನ್ನು ಪಡೆದಿದೆ ಎಂದು ಡಾ: ಶಾಲಿನಿ ರಜನೀಶ್, ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಸು) ಹಾಗೂ ನಿರ್ದೇಶಕರು, ಸಕಾಲ ಮಿಷನ್, ಇವರು ತಿಳಿಸಿದರು.

ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (NLSIU) ಆಯೋಜಿಸಿದ ಲೆಕ್ಚರ್ ಆನ್ ಸೀರೀಸ್‌ನಲ್ಲಿ ಇಂದು ಭಾಗವಹಿಸಿ ಮಾತನಾಡುತ್ತಾ ಅವರು, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011ರ ಚೌಕಟ್ಟಿನಲ್ಲಿ ನಾಗರಿಕರಿಗೆ ಹಲವಾರು ಸೌಲಭ್ಯಗಳನ್ನು ಹಾಗೂ ಹಕ್ಕುಗಳನ್ನು ನೀಡಿದ್ದು, ಈ ಹಕ್ಕುಗಳ ಚಲಾವಣೆಯನ್ನು ಸುಲಭ ರೀತಿಯಲ್ಲಿ ಮಾಡುವುದರಿಂದ ಈ ಹಕ್ಕುಗಳಿಗೆ ನಿಜವಾದ ಅರ್ಥ ಬರುತ್ತದೆ. ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ ಇಲಾಖೆ ವತಿಯಿಂದ ರಾಜ್ಯದಲ್ಲಿ ಚಾಲ್ತಿಯಲ್ಲಿರುವ 258 ಕಾನೂನುಗಳ ಕೈಪಿಡಿಯನ್ನು ಸಂಗ್ರಹಿಸಿ ಲೋಕಾರ್ಪಣೆ ಮಾಡಲಾಗಿದೆ ಹಾಗೂ ವೆಬ್‌ಸೈಟ್‌ನಲ್ಲಿ (dpal.kar.nic.in) ಪ್ರಕಟಿಸಲಾಗಿದೆ. ಈಗ ಕಾನೂನಿನಂತೆ ಕೆಲಸ ಮಾಡುವ ಸಮಯ, **"ಲೆಟ್ ಅಸ್ ಆಕ್ಟ್ ಆನ್ ದಿ ಆಕ್ಟ್ಸ್"** ಎಂದು ಕರೆ ನೀಡಿದರು.

ಸಭೆಯಲ್ಲಿ ಮುಂದಿನ ದಿವಸಗಳಲ್ಲಿ ಜನರನ್ನು ಹೆಚ್ಚು ಕಾಡುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಲಭ್ಯವಿರುವ ಕಾನೂನುಗಳನ್ನು ಅರ್ಥಪೂರ್ಣವಾಗಿ ಹಾಗೂ ಕ್ರಿಯಾಶೀಲರಾಗಿ ಅನುಷ್ಠಾನಗೊಳಿಸಲು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಮತ್ತು ಆಡಳಿತ ಸುಧಾರಣೆ ಇಲಾಖೆ ಒಂದು ಜಂಟಿ ಕಾರ್ಯಾಗಾರವನ್ನು ಮಾಡಲು ಅವಶ್ಯಕತೆಯನ್ನು ಕುರಿತು ಮಾತನಾಡಿದ ಅವರು, ಆಡಳಿತ ಸುಧಾರಣೆ ಇಲಾಖೆಯಿಂದ ಸರ್ಕಾರದ ನಿಯಮಗಳನ್ನು ಸುಲಭ ರೀತಿಗೊಳಿಸುತ್ತಿದ್ದು, ಇದರಿಂದಾಗಿ ನಾಗರಿಕರು ತಮ್ಮ ಹಕ್ಕುಗಳನ್ನು ಚಲಾಯಿಸಲು ಸುಲಭವಾಗುತ್ತದೆ ಎಂದರು.

ಸಕಾಲ ದೇಶಕ್ಕೆ ಮಾದರಿಯಾಗಿದ್ದು ಇನ್ನು ಹೆಚ್ಚು ಸರ್ಕಾರಿ ಸೇವೆಗಳನ್ನು ಸರ್ಕಾರದ ಅಡಿ ತರಲು ಸರ್ಕಾರ ಮುಂದಾಗಿದ್ದು, ಕರ್ನಾಟಕ ಸರ್ಕಾರಿ ನೌಕರ ವೃಂದದೊಂದಿಗೆ ಚರ್ಚಿಸಿ ಮುಂದಿನ ದಿನಗಳಲ್ಲಿ ಯಾವ ನಾಗರಿಕ ಸೇವೆಗಳ ಬಗ್ಗೆ ಹೆಚ್ಚು ದೂರುಗಳು ಸ್ವೀಕೃತವಾಗುತ್ತವೆ ಆ ಸೇವೆಗಳನ್ನು ಸಕಾಲ ಅಡಿಯಲ್ಲಿ ತರಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಮಾರಂಭದಲ್ಲಿ ಹಾಜರಿದ್ದ ಮಾಹಿತಿ ಹಕ್ಕು ಕಾಯ್ದೆ ಕಾರ್ಯಕರ್ತರಾದ ಹೆಸರಾನ್ವಿತ ಶ್ರೀಮತಿ ಅರುಣಾ ರಾಯ್‌ರವರು ಮಾತನಾಡುತ್ತಾ, ಕರ್ನಾಟಕ ಸರ್ಕಾರವು ಸಕ್ರಿಯವಾಗಿ ನಾಗರಿಕರ ಕುಂದುಕೊರತೆಗಳನ್ನು ಆಧರಿಸಿ ತುರ್ತು ಕ್ರಮವನ್ನು ಜರುಗಿಸಿ ದೂರುಗಳನ್ನು ನಿವಾರಿಸುವಲ್ಲಿ ಮಾಡಿರುವ ಕ್ರಮವನ್ನು ಶ್ಲಾಘಿಸಿದರು. ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತಂದರೆ ಹಾಗೂ ಇರುವ ಕಾನೂನುಗಳ ಸರಿಯಾದ ಅನುಷ್ಠಾನವನ್ನು ಮಾಡಿದರೆ ಬಹಳಷ್ಟು ಅನಾಹುತಗಳನ್ನು ಹಾಗೂ ನಾಗರಿಕರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬಹುದೆಂದು ತಿಳಿಸಿದರು.

**2. ಫ್ರಾನ್ಸ್ ವಿದ್ಯಾರ್ಥಿಗಳಿಂದ ಸಕಾಲ ಅಧ್ಯಯನಕ್ಕೆ ಇಂಟರ್ನ್‌ಶಿಪ್**

ಬೆಂಗಳೂರು, ಜುಲೈ 18: ಫ್ರಾನ್ಸ್ ದೇಶದ ರಾಯಭಾರಿಗಳು ಇಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನಾ ಇಲಾಖೆ ಸಚಿವರಾದ ಶ್ರೀ ಟಿ.ಬಿ.ಜಯಚಂದ್ರ ಅವರನ್ನು ಭೇಟಿ ಮಾಡಿ, ಸಕಾಲ ಯೋಜನೆಗೆ ಅಧ್ಯಯನಕ್ಕಾಗಿ ಸಾಂಸ್ಕೃತಿಕ ವಿನಿಮಯ ಯೋಜನೆಯಡಿ ಫ್ರಾನ್ಸ್ ವಿದ್ಯಾರ್ಥಿಗಳನ್ನು ನಿಯೋಜಿಸಲು ಇಚ್ಛಿಸುವುದಾಗಿ ತಿಳಿಸಿದರು.



ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಕ್ಕೆ ಸಂಪೂರ್ಣ ನೆರವನ್ನು ನೀಡುವುದಾಗಿ ಭರವಸೆ ನೀಡಿದ ಸಚಿವರು, ಕರ್ನಾಟಕ ಸರ್ಕಾರ ಫ್ರಾನ್ಸ್ ದೇಶದ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಅನುಕೂಲಗಳನ್ನು ಕಲ್ಪಿಸುವುದಾಗಿ ತಿಳಿಸಿದರು


ಸಕಾಲ ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿದ ಕೌನ್ಸಲ್ ಜೆನರಲ್ ಶ್ರೀ ಎರಿಕ್ ಲಾವೆರ್‌ತು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಅಟಾಚೆ ಡಾ: ಜೆನಿಫರ್ ಕ್ಲಾರ್ಕ್, ಸಕಾಲ ಮಿಷನ್‌ನ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಆಸಕ್ತಿದಾಯಕ ಕಾರ್ಯಕ್ರಮವಾಗಿದ್ದು, ವಿಶ್ವವಿದ್ಯಾಲಯದ ನಾಲ್ಕನೇ ವರ್ಷದಲ್ಲಿರುವವರು, ಯೋಜನೆಗಳನ್ನು ಹುಡುಕುತ್ತಿರುವುದರಿಂದ, ಸಕಾಲ ಅಧ್ಯಯನ ಸೂಕ್ತ ವಿಷಯವಾಗಬಹುದು ಎಂದು ಅಭಿಪ್ರಾಯಪಟ್ಟರು. ಫ್ರಾನ್ಸ್‌ನಲ್ಲಿರುವ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಿಗೆ ಪತ್ರ ಬರೆದು ಸೂಕ್ತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಸೂಚಿಸುವುದಾಗಿ ತಿಳಿಸಿದರು. ಮುಂದುವರೆದು ಅವರು, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಸುಮಾರು 50 ಫ್ರೆಂಚ್ ಕಂಪನಿಗಳಿದ್ದು, ಈ ಕಂಪನಿಗಳಲ್ಲಿ ಸುಮಾರು 20 ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಮಾಡುತ್ತಿದ್ದಾರೆ ಎಂದರು. ಫ್ರೆಂಚ್ ವಿದೇಶಾಂಗ ಸಚಿವಾಲಯದ ಮೂಲಕ ಸುಮಾರು 100 ಜನ ವಿದ್ಯಾರ್ಥಿಗಳನ್ನು ಈ ವರ್ಷ ಕರ್ನಾಟಕಕ್ಕೆ ಕಳುಹಿಸಲಾಗುತ್ತಿದೆ ಎಂದವರು ತಿಳಿಸಿದರು.

ಫ್ರೆಂಚ್ ತಂಡದೊಂದಿಗೆ ಮಾತನಾಡಿದ ಶಾಲಿನಿ ರಜನೀಶ್ ಅವರು, ಫ್ರಾನ್ಸ್ ದೇಶದ ಈ ಸದಿಚ್ಛೆಯನ್ನು ಶ್ಲಾಘಿಸಿದರು. ಈಗಾಗಲೇ ಸಕಾಲವು, ಚೆನ್ನೈನ ಐಐಟಿ ಮತ್ತು ದೆಹಲಿ ಸ್ಕೂಲ್ ಆಫ್ ಇಕನಾಮಿಕ್ಸ್ ಸಂಸ್ಥೆಗಳು ಸಕಾಲದೊಡನೆ ಈಗಾಗಲೇ 8 ವಾರಗಳ ವಿದ್ಯಾರ್ಥಿ ಇಂಟರ್ನ್‌ಶಿಪ್‌ಗಾಗಿ ಭಾಗೀದಾರರಾಗಿವೆ ಎಂದು ಹೇಳಿದರು. ಈ ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಪೂರೈಸಿದ್ದು ವರದಿಯನ್ನು ಸಲ್ಲಿಸಿದ್ದಾರೆ ಎಂದು ಅವರು ತಿಳಿಸಿದರು.

### ೩. ಸಮುದಾಯ ಪೊಲೀಸ್ ಸರ್ಕಾರದೊಂದಿಗೆ ಕೈಜೋಡಿಸಿದರೆ ಸುಧಾರಣೆ ಸಾಧ್ಯ

ಸಮಾಜದಲ್ಲಿ ಹೆಚ್ಚುತ್ತಿರುವ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳನ್ನು ಸುಧಾರಿಸಲು ಪ್ರತಿ ಬಡಾವಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಪೊಲೀಸ್ ತಂಡವು ಸರ್ಕಾರದ ಜೊತೆಗೆ ಕೈಜೋಡಿಸಬೇಕು ಎಂದು ಸಕಾಲ ಮಿಷನ್ ನಿರ್ದೇಶಕರು, ಡಿಪಿಎಆರ್, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಡಾ: ಶಾಲಿನಿ ರಜನೀಶ್ ಕರೆ ನೀಡಿದರು.

ಸಕಾಲ ತರಬೇತಿ ಕೇಂದ್ರದಲ್ಲಿ ಸಮುದಾಯ ಪೊಲೀಸ್ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಕರಿಗೆ ಆಯೋಜಿಸಿದ್ದ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡುತ್ತಿದ್ದರು.



ಸಮುದಾಯ ಪೊಲೀಸ್ ಸೇವೆಯಲ್ಲಿ ಕಾರ್ಯನಿರತರಾಗಿರುವ ಸ್ವಯಂ ಸೇವಕರಿಗೆ ದೂರು ಪೆಟ್ಟಿಗೆಯನ್ನು ವಿತರಿಸುವ ಯೋಜನೆಯನ್ನು ಹಮ್ಮಿಕೊಂಡಿರುವ ಡೆಡಿಕೇಟೆಡ್ ಸರ್ವೆಂಟ್ಸ್ ಆಫ್ ಇಂಡಿಯಾದ ಪ್ರಯತ್ನವನ್ನು ಶ್ಲಾಘಿಸಿದ ಪ್ರಧಾನ ಕಾರ್ಯದರ್ಶಿಗಳು, ಈ ಪೆಟ್ಟಿಗೆಗಳಲ್ಲಿ ಸಂಗ್ರಹವಾಗುವ ದೂರುಗಳನ್ನು ಸಮಗ್ರ ದೂರು ನಿರ್ವಹಣಾ ಪೋರ್ಟಲ್ **ಇ-ಜನಸ್ಪಂದನ** ದ ಮೂಲಕ ಪರಿಣಾಮಕಾರಿಯಾಗಿ ಪರಿಹರಿಸಲು ಸಾಧ್ಯವಿದೆ ಎಂದು ವಿವರಿಸಿದರು. ನಾಗರಿಕರು ಸಕಾಲ ಕರೆ ಕೇಂದ್ರ ೪೪೫೫೪೪೫೫ ಗೆ ಕರೆ ಮಾಡುವ ಮೂಲಕವೂ ತಮ್ಮ ದೂರುಗಳನ್ನು ಸಲ್ಲಿಸಬಹುದು ಎಂದು ತಿಳಿಸಿದರು. ಡೆಡಿಕೇಟೆಡ್ ಸರ್ವೆಂಟ್ಸ್ ಆಫ್ ಇಂಡಿಯಾದ ಕಾರ್ಯದರ್ಶಿಗಳಾದ ಶ್ರೀ ಷರೀಫ್ ಅವರು ಸದ್ಯಕ್ಕೆ ೫೦೦೦ ದೂರು ಪೆಟ್ಟಿಗೆಗಳನ್ನು ಹಂಚುವ ಯೋಜನೆಯಿದೆ ಎಂದು ತಿಳಿಸಿದರು.

**4. ಬೆಂಗಳೂರಿನಲ್ಲಿ ಉತ್ತಮ ಆವಿಷ್ಕಾರಗಳು ಪುಸ್ತಕ ಬಿಡುಗಡೆ**: ಈ ಪುಸ್ತಕದಲ್ಲಿ ಸಕಾಲ ಆವಿಷ್ಕಾರಿ ಯೋಜನೆಯ ಬಗ್ಗೆ ವಿವರಿಸಲಾಗಿದೆ.







**ಈ ಎರಡನೆ ಆವರ್ತಿಯನ್ನು ರೈನ್ ಟ್ರಿ ರವರು ಪ್ರಸ್ತುತಪಡಿಸಿದ್ದು, ಇದರಲ್ಲಿ ಆವಿಷ್ಕಾರಿ ಉದ್ಯಮ, ಆರೋಗ್ಯ, ಕಲೆ, ಆಡಳಿತದಲ್ಲಿ ಕೌಶಲ್ಯಪೂರ್ಣ/ಉತ್ತಮವಾಗಿರುವ ಅಭ್ಯಾಸಗಳ ಬಗ್ಗೆ ವಿವರಿಸಲಾಗಿದೆ. ಸಕಾಲದ ಬಗ್ಗೆ ಇದರಲ್ಲಿ ನಮೂದಿಸಿರುವ ವಿವರಣೆ ಈ ಕೆಳಗಿನಂತಿದೆ.**

# Transforming governance

Sakala is a citizen friendly administrative initiative that has made Karnataka a role model, demonstrating a consistent decline in both grievances and rejections of applications. States like Odisha, Punjab, Jharkhand, Rajasthan, Kerala and Andhra Pradesh, and countries like Pakistan, Bangladesh and Afghanistan are looking to replicate this model.




*Innovative measures like street theatre have been used to spread awareness about Sakala.*

The notorious red tape of bureaucracy has brought many citizens to their knees and is so common as to have become an accepted fact. Two such instances were when an old widow seeking pension and another person seeking a disability certificate travelled as far as 500 km to meet the Chief Minister at the *Janatha Darshan*. This was the trigger that led to the birth of Sakala.

Sakala has been people-centric, much before the Act was formalised. Its name was conceived by the people, as the Government held an open competition to choose it. 'Sakala' which in Kannada means 'In time or good time' was chosen as the best entry. The logo was also suggested by the citizens and shows a clock which symbolises 'time consciousness' and a hammer which signifies that officials who do not comply with deadlines will face consequences for their tardiness. Sakala's slogan "No more Delays; we deliver on Time" has redefined the work ethics of the Government employees.

Launched in April 2012 by the Department of Administrative Reforms, Government of Karnataka, Sakala or the Karnataka Guarantee of Services to Citizens Act (KGSC Act), 2011, has rapidly become successful.

It redresses grievances of citizens about a range of government services and, true to its name, the initiative promises that there shall be 'no more delays, delivery within the promised time'.

Sakala has a multipronged approach - converging all departments into a single electronic platform to ensure accountability and traceability. No longer can applications or files go missing as every citizen gets a computerised acknowledgement receipt that records the due date of delivery.



*Law, Justice & Parliamentary Affairs and Animal Husbandry Minister TB Jayachandra at a phone-in programme about Sakala conducted by Doordarshan.*

Help desks and call centres provide hassle-free service from 47 departments offering 478 services, with more to be added over time. Each of the 40,000 Government offices has information boards at the help desks, and services are available online at www.sakala.kar.nic.in. All information related to



(L-R) Former Minister, Department of Personnel and Training, Narayana Swamy, Government of India, Chief Minister of Karnataka Siddaramaiah, Chief Secretary Kaushik. Mukherjee and Shalini Rajneesh, Principal Secretary, DPAR(AR) & Mission Director, Sakala Mission at a regional conference.

**AWARDS**


*Sakala's e-governance platform received the National Award in the Government category at the Quality Council of India-DL Shah Quality awards in 2014. It also received the National e-Governance award in 2014 and the Google Innovation award in 2013.*

the departments, their services and procedures, along with the tracking of the status of application facility is available on the portal in real time. Citizens who are not IT- savvy, can call the call centre at 080-44554455 which is a one stop shop for giving information as well as redressing complaints. Sakala claims that within 20 months of its launch, 44 million applications have been addressed in time. Over 300 citizens have claimed cash compensation for delays and defaults which are recovered from the salaries of the erring officials. The government issues a public report card on the monthly performance ranking of districts, and there is a friendly rivalry amongst them to improve their rank.

The state-owned TV network Doordarshan also conducts a phone-in programme with the Law Minister on alternate Wednesdays to facilitate direct interaction with citizens. Concurrent evaluation by IIM Bangalore and Chicago University ensures that the Sakala initiative lives up to its promise.

Sakala relies on proactive citizen feedback to continuously implement reforms as well as add to its list of services. An independent evaluation study found 99 percent citizens satisfied with the initiative. Employees were also found to be happy with the new system, so much so that 93 percent citizens stated that the officials at the counter were courteous and helpful.

Sakala is not a case of isolated success; it is replicable and its standardisation and process documentation earned it the ISO 9001 certification. Karnataka is all set to be 100 percent Sakala compliant.




Posters drawn by children depicting the benefits of Sakala

**Tel: +91 80 4455 4455**
**www.sakala.kar.nic.in**

**INNOVATION**

*Dr Shalini Rajneesh of the Department of Administrative Reforms, which implemented Sakala, says, "We have imbibed most of the recommendations of the Second Administrative Reforms Commission, to transform governance into a citizen- friendly and outcome oriented activity. We followed the Government of India's Sevottam model to make the employees decide the standards of service delivery through a bottom-up approach.*

*The State government employees' association joined the capacity building exercise to transform the bureaucratic mindset to a service-oriented mentality. An innovative media that includes social media, extensively empowers citizens. Citizens working in IT companies and corporates are part of the Sakala-awareness drive, modelled on American scholar Everett M Rogers' Diffusion of Innovations, and help make Sakala go viral.*

*Some citizens have become Sakala Mitras (friends of Sakala) and assist in simplifying governance. For example, life time caste certificate is now issued instead of yearly validity, the Revenue Department does not seek affidavits for its online service, services are accessbile anytime and anywhere through cyber cafes.*

5. 30.7.2014, ಬೆಂಗಳೂರು: ಜಂಟಿ ಕಾರ್ಯದರ್ಶಿ ಶ್ರೀಮತಿ ಕೆ ವಿ ಜಯಲಕ್ಷ್ಮಿ ರವರ ಸೇವೆಯಿಂದ ನಿವೃತ್ತಿ ಹೊಂದಿದ್ದು ಅವರಿಗೆ ಬೀಳ್ಕೋಡುಗೆ ಸಮಾರಂಭವನ್ನು ಮಿಷನ್ ಹಮ್ಮಿಕೊಂಡಿತ್ತು, 38 ವರ್ಷಗಳ ಕಾಲ ಸರಕಾರದಲ್ಲಿ ಸೇವೆ ಸಲ್ಲಿಸಿದ್ದು ಸಕಾಲ ಮಿಷನ್ ಕಾರ್ಯ ನಿರ್ವಹಣೆಯಲ್ಲಿ ಇವರ ಕೊಡುಗೆಯು ಮಹತ್ತರವಾದದ್ದು. ಮಿಷನ್‌ನ ಎಲ್ಲಾ ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



6. 24.07.2014 ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕುಗಳ ಕಛೇರಿಗಳ ತಪಾಸಣೆಯನ್ನು ಶ್ರೀ ವರಪ್ರಸಾದ್ ರೆಡ್ಡಿ, ಕೆಎಎಸ್, ಆಡಳಿತಾಧಿಕಾರಿ, ಸಕಾಲ ಮಿಷನ್ ರವರು ಕೈಗೊಂಡಿದ್ದರು ಇವರೊಟ್ಟಿಗೆ ಐಐಎಂ- ಬೆಂಗಳೂರಿನ ಶ್ರೀಮತಿ ರಂಜನಿ, ಸಂಶೋದಕಿ ಮತ್ತು ನಿರ್ವಹಣ ಸಮಾಲೋಚಕರು ಇದ್ದರು ಕಛೇರಿಯಲ್ಲಿ ಡಾ|| ಎಲ್ ಸಿ ನಾಗರಾಜು ಕೆ ಎ ಎಸ್, ಸಹಾಯಕ ಆಯುಕ್ತರು, ಬೆಂಗಳೂರು ಉಪವಿಭಾಗ ಮತ್ತು ಡಾ|| ದಯಾನಂದ, ತಹಸಿಲ್ದಾರ್ ಹಾಗೂ ಉಪತಹಸಿಲ್ದಾರರು ಹಾಗೂ ಇತರೆ ಕಂದಾಯ ಇಲಾಕೆಯ ಕ್ಷೇತ್ರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



**7.** 25.07.2014 ಬೆಂಗಳೂರು: ಬೆಂಗಳೂರು ಆನೇಕಲ್ ತಾಲ್ಲೂಕುಗಳ ಕಛೇರಿಗಳ ತಪಾಸಣೆಯನ್ನು ಶ್ರೀ ವರಪ್ರಸಾದ್ ರೆಡ್ಡಿ,ಕೆಎಎಸ್, ಆಡಳಿತಾಧಿಕಾರಿ, ಸಕಾಲ ಮಿಷನ್ ರವರು ಕೈಗೊಂಡಿದ್ದರು ಇವರೊಟ್ಟಿಗೆ ಐಐಎಂ– ಬೆಂಗಳೂರಿನ ಶ್ರೀಮತಿ ರಂಜನಿ, ಸಂಶೋದಕಿ ಮತ್ತು ನಿರ್ವಹಣ ಸಮಾಲೋಚಕರು ಇದ್ದರು ಕಛೇರಿಯಲ್ಲಿ ಶ್ರೀ ಅನಿಲ್ ಕುಮಾರ್, ಕೆಎಎಸ್, ತಹಸಿಲ್ದಾರ್ ಆನೇಕಲ್ ಹಾಗೂ ಕಛೇರಿಯ ಎಲ್ಲಾ ಸಿಬ್ಬಂದಿಗಳು ತಪಾಸಣೆ ಸಮಯದಲ್ಲಿ ಉಪಸ್ಥಿತರಿದ್ದರು, ವಿಳಂಬ ವಿಲೇಗೆ ಕಾರಣಗಳನ್ನು ವಿಮರ್ಶಿಸಲಾಯಿತು





Tuesday, 15 July, 2014

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ

Sun, 06/23/2013 - 01:07

ತುಮಕೂರು: `ಸಕಾಲ' ಯೋಜನೆಯಲ್ಲಿ ಮಧ್ಯವರ್ತಿಗಳ ಕಾಟವನ್ನು ಗಂಭೀರವಾಗಿ ತೆಗೆದುಕೊಂಡಿರುವ ಸರ್ಕಾರವು ಸಕಾಲ ಕೇಂದ್ರಗಳಿಗೆ ದಿಢೀರ್ ದಾಳಿ ನಡೆಸಿ ಮಧ್ಯವರ್ತಿಗಳನ್ನು ಪತ್ತೆ ಹಚ್ಚಲು ಪ್ರತ್ಯೇಕ ತನಿಖಾ ತಂಡ ರಚಿಸಲು ತೀರ್ಮಾನಿಸಿದೆ.

ನಗರದ ಸಕಾಲ ಕೇಂದ್ರದಲ್ಲಿ ಮಧ್ಯವರ್ತಿಗಳ ಕಾಟ ಕುರಿತು ಈಚೆಗಷ್ಟೇ `ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ವರದಿ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಸರ್ಕಾರ ಸಕಾಲ ಕೇಂದ್ರಗಳನ್ನು ಮಧ್ಯವರ್ತಿಗಳಿಂದ ಮುಕ್ತಗೊಳಿಸುವ ಸಲುವಾಗಿ ತನಿಖಾ ತಂಡ ರಚನೆಗೆ ಮುಂದಾಗಿದೆ.

ಶನಿವಾರ ನಗರಕ್ಕೆ ಭೇಟಿ ನೀಡಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಶಾಲಿನಿ ರಜನೀಶ್ `ಪ್ರಜಾವಾಣಿ'ಯೊಂದಿಗೆ ಮಾತನಾಡಿ, ಸಕಾಲ ಕೇಂದ್ರಗಳಲ್ಲಿ ಮಧ್ಯವರ್ತಿಗಳ ಕಾಟ ತಮ್ಮ ಗಮನಕ್ಕೂ ಬಂದಿತ್ತು ಎಂಬುದನ್ನು ಒಪ್ಪಿಕೊಂಡರು.

`ಪ್ರಜಾವಾಣಿ' ವರದಿಯನ್ನು ಗಮನಿಸಿರುವುದಾಗಿ ತಿಳಿಸಿದ ಅವರು, ಇನ್ನೆರಡು ಮೂರು ದಿನಗಳಲ್ಲೇ ತನಿಖಾ ತಂಡಗಳನ್ನು ರಚಿಸಲಾಗುವುದು. ಈ ತಂಡಗಳು ರಾಜ್ಯದಾದ್ಯಂತ ಸಕಾಲ ಕೇಂದ್ರಗಳಿಗೆ ಭೇಟಿ ನೀಡಿ ಮಧ್ಯವರ್ತಿಗಳನ್ನು ಪತ್ತೆ ಹಚ್ಚಲಿವೆ. ದಾಳಿ ವೇಳೆ ಸಿಕ್ಕಿಬಿದ್ದ ಮಧ್ಯವರ್ತಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಹೇಳಿದರು.

ಇದಕ್ಕೂ ಮುನ್ನ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದ ಗೂಗಲ್ ಸಂಸ್ಥೆ ಅಧ್ಯಕ್ಷರು ಸಹ ಸಕಾಲ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಮೆರಿಕದಂತಹ ದೇಶದಲ್ಲೂ ಇಂತಹ ಯೋಜನೆ ಅಸಾಧ್ಯ ಎಂದು ಸ್ಮರಿಸಿದ್ದಾಗಿ ತಿಳಿಸಿದರು.

ಮನೆ ಬಾಗಿಲಿಗೇ ಬಂದು ನೋಂದಣಿ; ಏಳು ಜಿಲ್ಲೆಗಳಲ್ಲಿ ಜಾರಿ

## ಪಿಂಚಣಿ ಕಾರ್ಡ್ ಈಗ ಇನ್ನಷ್ಟು ಸ್ಮಾರ್ಟ್

**ದೇವಯ್ಯ ಗುತ್ತೇದಾರ್** ಗುಲ್ಬರ್ಗ

ಸಾಮಾಜಿಕ ಭದ್ರತೆ ಯೋಜನೆ ಅಡಿ ವೃದ್ಧಾಪ್ಯ ವೇತನ, ವಿಕಲಚೇತನ ಮಾಸಾಶನ ಪಡೆಯುವ ಫಲಾನುಭವಿಗಳು ಸ್ಮಾರ್ಟ್‌ಕಾರ್ಡ್‌ಗಾಗಿ ಇನ್ಮುಂದೆ ಪರದಾಡಬೇಕಿಲ್ಲ, ಕಾರಣ ಈ ಕಾರ್ಡ್‌ಗೆ ಹೆಸರು ನೋಂದಣಿ ಮಾಡಿಕೊಳ್ಳಲು ಅಧಿಕಾರಿಗಳೇ ಫಲಾನುಭವಿಗಳ ಮನೆಗೆ ಬರುತ್ತಾರೆ.

ವೃದ್ಧಾಪ್ಯ, ವಿಧವಾ, ವಿಕಲಚೇತನ, ಸಂಧ್ಯಾಸುರಕ್ಷಾ, ಮನಸ್ವಿನಿ, ಮೈತ್ರಿ ಸೇರಿದಂತೆ ವಿವಿಧ ಪಿಂಚಣಿ ವಿತರಣೆಯಲ್ಲಿ ಭ್ರಷ್ಟಾಚಾರ ಮತ್ತು ವಿಳಂಬ ತಪ್ಪಿಸಲು ಗುಲ್ಬರ್ಗ, ಯಾದಗಿರಿ, ಚಾಮರಾಜನಗರ, ಮಂಡ್ಯ, ಬಳ್ಳಾರಿ, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸ್ಮಾರ್ಟ್ ಕಾರ್ಡ್ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ.

ನೋಂದಣಿ ತ್ವರಿತಕ್ಕಾಗಿ ಅಧಿಕಾರಿಗಳು ಮತ್ತು ತಂತ್ರಜ್ಞರು ಫಲಾನುಭವಿ ಮನೆಗೆ ಹೋಗಿ ನೋಂದಣಿ ಮಾಡಿಕೊಳ್ಳುವಂತೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.ಇದರಿಂದ ಫಲಾನುಭವಿಗಳು ಅನಾವಶ್ಯಕವಾಗಿ ಅಲೆದಾಡುವುದು ತಪ್ಪಲಿದೆ. ಮಧ್ಯ ವರ್ತಿಗಳ ಹಾವಳಿಗೂ ಬ್ರೇಕ್ ಬೀಳಲಿದ್ದು, ಕೆಲಸವೂ ಬೇಗನೆ ಪೂರ್ಣಗೊಳ್ಳಲಿದೆ.

**ಪಿಂಚಣಿ ಯೋಜನೆಯ ಸ್ಮಾರ್ಟ್‌ಕಾರ್ಡ್ ಯೋಜನೆಯ ಪ್ರಾಯೋಗಿಕ ಅನುಷ್ಠಾನಕ್ಕಾಗಿ ಗುಲ್ಬರ್ಗ ಜಿಲ್ಲೆಯನ್ನು ಸರಕಾರ ಆಯ್ಕೆ ಮಾಡಿದೆ. ಈ ಯಂತ್ರ ಎಟಿಎಂ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪಿಂಚಣಿ ವಿತರಣೆಯಲ್ಲಿ ಆಗುತ್ತಿರುವ ಲೋಪಗಳಿಗೆ ತಡೆ ಬೀಳಲಿದೆ. ಫಲಾನುಭವಿಗಳ ಮನೆಗೆ ತೆರಳಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ.**

**-ಇಲಿಯಾಸ್ ಅಹ್ಮದ್,**
ಸಹಾಯಕ ಆಯುಕ್ತ, ಗುಲ್ಬರ್ಗ

**ವ್ಯಾಪಕ ಪ್ರಚಾರ:** ನೋಂದಣಿ ಆಗದಿರುವ ಫಲಾನುಭವಿಗಳ ಪಟ್ಟಿಯನ್ನು ಪಡೆದು ಬ್ಯಾಂಕ್ ಹಾಗೂ ತಂತ್ರಾಂಶ ಪೂರೈಸುವ ಕಂಪನಿಯೊಂದಿಗೆ ಸಭೆ ನಡೆಸಿ ನೋಂದಣಿಗೆ ಸಮಯ ನಿಗದಿಪಡಿಸಬೇಕು, ಫಲಾನುಭವಿಗಳಿಗೆ ಎನ್‌ರೋಲ್‌ಮೆಂಟ್ ನೋಟಿಸ್ ಮುದ್ರಿಸಿಕೊಳ್ಳಬೇಕು, ನೋಂದಣಿ ಕಾರ್ಯದ ಬಗ್ಗೆ ಗ್ರಾಮಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ. ವೇಳಾಪಟ್ಟಿಯ ಅನುಸಾರ ನೋಂದಣಿ ಮಾಡುವಾಗ ಗ್ರಾಮಕ್ಕೆ ಸಂಬಂಧಿಸಿದ ಗ್ರಾಮ ಲೆಕ್ಕಾಧಿಕಾರಿ, ರಾಜಸ್ವ ನಿರೀಕ್ಷಕ, ಬಿಸಿನೆಸ್ ಕರೆಸ್ಪಾಂಡೆಂಟ್‌ನೊಂದಿಗೆ ಹಾಜರಿದ್ದು, ಫಲಾನುಭವಿಗಳ ಮಾಹಿತಿಯೊಂದಿಗೆ ಅವರ ಗುರುತನ್ನು ಖಚಿತ ಪಡಿಸಿಕೊಳ್ಳುವುದು ಮತ್ತು ನೋಂದಣಿಗೆ ಅವಶ್ಯವಿರುವ ಎಲ್ಲ ಮಾಹಿತಿ ಮತ್ತು ದಾಖಲಾತಿಗಳನ್ನು ಪಡೆಯಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ನೋಂದಣಿ ವೇಳೆ ಫಲಾನುಭವಿಗಳಿಗೆ ಬ್ಯಾಂಕ್ ಖಾತೆ ತೆರೆಯಲು ಅವಶ್ಯವಿರುವ ಎಲ್ಲ ಮಾಹಿತಿಯೊಂದಿಗೆ ಬ್ಯಾಂಕ್ ಖಾತೆ ತೆರೆಯುವ ಅರ್ಜಿಯನ್ನೂ ಫಲಾನುಭವಿಗಳ ಸಹಿ ಪಡೆಯಬೇಕು. ಮಾಹಿತಿಯನ್ನು ಪಡೆದ ನಂತರ ಅವರ ಸಹಿ, ಹೆಬ್ಬೆಟ್ಟಿನ ಗುರುತು ಪಡೆಯಬೇಕು, ಬ್ಯಾಂಕ್ ಖಾತೆ ತೆರೆಯುವ ಮತ್ತು ಸ್ಮಾರ್ಟ್ ಕಾರ್ಡ್ ನೀಡುವ ಬಗ್ಗೆ ಲೀಡ್ ಬ್ಯಾಂಕ್, ಸಾಫ್ಟ್‌ವೇರ್ ಪೂರೈಸುವ ಕಂಪನಿಗಳೊಂದಿಗೆ ಸಹಾಯಕ ಆಯುಕ್ತರು ಸಭೆ ನಡೆಸಿ ಅರ್ಹರಿಗೆ ಪಿಂಚಣಿ ಸಿಗುವಂತೆ ಮಾಡಬೇಕೆಂದು ಹೇಳಲಾಗಿದೆ. ಏಪ್ರಿಲ್ ಅಂತ್ಯಕ್ಕೆ ಒಟ್ಟು 40,63,731 ಮಂದಿಗೆ ವಿವಿಧ ಯೋಜನೆ ಅಡಿ ಪಿಂಚಣಿ ಫಲಾನುಭವಿಗಳಿದ್ದಾರೆ.

ಉದಯವಾಣಿ

## ಟ್ವೀಟರ್, ಫೇಸ್‌ಬುಕ್‌ಗೆ ಸಿದ್ದು ಸರ್ಕಾರ ಪ್ರವೇಶ



ಸೋಷಿಯಲ್ ನೆಟ್‌ವರ್ಕ್ ಪ್ರಚಾರಕ್ಕೆ ಚಾಲನೆ.

ಬೆಂಗಳೂರು: 'ನಿಮ್ಮ ಸರ್ಕಾರ ಇದೀಗ ಸಾಮಾಜಿಕ ಜಾಲತಾಣದಲ್ಲಿದೆ- ಸಂಪರ್ಕಿಸಿ. ಮಾಹಿತಿಯನ್ನು ಮೀರಿ ಮುನ್ನಡೆಯಿರಿ. ಸರ್ಕಾರದೊಂದಿಗೆ ಈ ಮೂಲಕವೂ ಸಂವಹನ ನಡೆಸಿ'. ಹೀಗಂತ ಮುಖ್ಯಮಂತ್ರಿ ಸಿದ್ದರಾಮಯ್ಯ 'ಟ್ವೀಟ್' ಮಾಡುವ ಮೂಲಕ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸೋಮವಾರ ಹಮ್ಮಿಕೊಂಡಿದ್ದ 'ಸಾಮಾಜಿಕ ಜಾಲತಾಣ ಪ್ರವೇಶ'ಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಸಿದ್ದರಾಮಯ್ಯ, 'ಸರ್ಕಾರದ ಕೆಲಸಗಳನ್ನು ಜನರಿಗೆ ತಲುಪಿಸುವುದರ ಜತೆಗೆ ಜನರಿಂದ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಹಾಗೂ ಅದಕ್ಕೆ ಪೂರಕವಾಗಿ ಯೋಜನೆಗಳನ್ನು ರೂಪಿಸುವುದು ಇದರ ಮುಖ್ಯ ಉದ್ದೇಶ. ಈ ಮೂಲಕ ಸರ್ಕಾರವು ಜನರೊಂದಿಗೆ ನೇರ ಸಂಪರ್ಕ ಇಟ್ಟುಕೊಳ್ಳಲಿದೆ' ಎಂದರು.

ಕಾರ್ಯಕ್ರಮದಲ್ಲಿ ವಾರ್ತಾ ಸಚಿವ ರೋಷನ್‌ಬೇಗ್, ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ನಿರ್ದೇಶಕ ಎನ್.ಆರ್. ವಿಶುಕುಮಾರ್, ಮಾಜಿ ಸಚಿವ ಎಚ್.ಡಿ. ರೇವಣ್ಣ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮಿನ್‌ಮಟ್ಟು ಮತ್ತಿತರರು ಉಪಸ್ಥಿತರಿದ್ದರು.

**ಜಾಲತಾಣಗಳ ವಿಳಾಸ:**

facebook.com/karnatakavarthe.official

www.youtube.com/karnatakavarthe

www.twitter.com/karnatakavarthe

'ನಾನೂ ಟ್ವೀಟ್ ಮಾಡ್ತೀನಿ...' 'ನಾನು ಈ ಫೇಸ್ ಬುಕ್ಕು, ಟ್ವೀಟ್ಟರ್ರು, ಬಳಸುವುದು ಕಡಿಮೆ. ಆದರೆ, ಈಗ ನಾನೂ ಇನ್ಮುಂದೆ ಇದರಲ್ಲಿ ಆ್ಯಕ್ಟಿವ್ ಆಗಿರಬೇಕು ಅಂದುಕೊಂಡಿದ್ದೀನಿ..' ಎಂದು ಸಿದ್ದು ತಿಳಿಸಿದರು.

## 'ಸಕಾಲ'ಕ್ಕೆ ಸೇವೆ ನೀಡದಿದ್ದರೆ ಅಧಿಕಾರಿಗಳ ವೇತನ ಕಟ್

- ಕಡಿತವಾದ ಸಂಬಳದಿಂದಲೇ ದೂರುದಾರನಿಗೆ ಪರಿಹಾರ
- ವಿಧಾನಸಭೆಯಿಂದ ತಿದ್ದುಪಡಿ ಮಸೂದೆ ಅಂಗೀಕಾರ

ವಿಧಾನಸಭೆ: ಸಕಾಲ ಸೇವೆಯಡಿ ನಿಗದಿತ ಸಮಯದಲ್ಲಿ ಸೇವೆ ನೀಡದ ಪ್ರಕರಣಗಳಲ್ಲಿ ಅರ್ಜಿದಾರರಿಗೆ ನೀಡುವ ಪರಿಹಾರ ವೆಚ್ಚವನ್ನು ತಪ್ಪಿತಸ್ಥ ಅಧಿಕಾರಿ ವೇತನದಿಂದ ಕಡಿತಗೊಳಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸಕಾಲ ಸೇವೆಗಳ (ತಿದ್ದುಪಡಿ) ವಿಧೇಯಕ-2014'ಕ್ಕೆ ಅಂಗೀಕಾರ ನೀಡಲಾಯಿತು.

ಬುಧವಾರ ಕಾನೂನು ಮತ್ತು ಟಿ.ಬಿ.ಜಯಚಂದ್ರ ವಿಧೇಯಕ ಮಂಡಿಸಿ, ಸೇವೆಯಲ್ಲಿ ವಿಳಂಬವಾದರೆ ಅರ್ಜಿದಾರನಿಗೆ ಸರ್ಕಾರದಿಂದ ಪರಿಹಾರದ ವೆಚ್ಚ ನೀಡಲಾಗುತ್ತಿತ್ತು. ಇದೀಗ ಆ ವೆಚ್ಚ ತಪ್ಪಿತಸ್ಥ ಅಧಿಕಾರಿಯಿಂದಲೇ ದಂಡದ ರೂಪದಲ್ಲಿ ಪಡೆಯುವುದು, ಸೇವೆ ನೀಡುವಲ್ಲಿ ಏಳು ಬಾರಿ ತಪ್ಪು ಮಾಡುವ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವುದು, ಅಂಚೆ ಮೂಲಕವೂ ಸಕಾಲ ಸೇವೆ ಪಡೆಯಲು ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ವಿವರಿಸಿದರು.

**ಚರ್ಚೆ:** ಇದಕ್ಕೂ ಮುನ್ನ ಸಕಾಲ ಸೇವೆಯ ನ್ಯೂನ್ಯತೆ ಹಾಗೂ ವಾಸ್ತವವಾಗಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್, ಬಿಜೆಪಿಯ ಗೋವಿಂದ ಕಾರಜೋಳ, ಅರವಿಂದ ಬೆಲ್ಲದ್, ಕಾಂಗ್ರೆಸ್‌ನ ರಮೇಶ್‌ಕುಮಾರ್, ಶ್ರೀನಿವಾಸ್, ರುದ್ರಪ್ಪ ಲಮಾಣಿ, ಪ್ರಸನ್ನಕುಮಾರ್, ಬಿಎಸ್‌ಆರ್ ಕಾಂಗ್ರೆಸ್‌ನ ಪಿ.ರಾಜೀವ್ ಪ್ರಸ್ತಾಪಿಸಿದರು.

ಸದಸ್ಯರ ಎಲ್ಲ ಸಲಹೆ ಸೂಚನೆ ಗಮನದಲ್ಲಿಟ್ಟುಕೊಂಡು ಸೂಕ್ತ ತಿದ್ದುಪಡಿ ತರಲಾಗುವುದು. ಅಧಿಕಾರಿಗಳಿಗೆ ಹೆಚ್ಚು ಹೊಣೆಗಾರಿಕೆ ವಹಿಸಲಾಗುವುದು. ಜಿಲ್ಲಾ ಮಟ್ಟದಲ್ಲೇ ತಪ್ಪಿತಸ್ಥ ಅಧಿಕಾರಿ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿದರೆ ಸರ್ಕಾರ ಆ ಕಡತ 1 ತಿಂಗಳಲ್ಲಿ ವಿಲೇವಾರಿ ಮಾಡಲು ಕಾಲಮಿತಿ ನಿಗದಿ ಮಾಡಲಿದೆ. ಜನಸಾಮಾನ್ಯರಿಗೆ ತ್ವರಿತ ಸೇವೆ ದೊರಕಿಸಿಕೊಡುವ ನಿಟ್ಟಿನಲ್ಲಿ ನಿಯಮಾವಳಿ ಬಿಗಿಗೊಳಿಸಲಾಗುವುದು ಎಂದು ಜಯಚಂದ್ರ ಭರವಸೆ ನೀಡಿ ವಿಧೇಯಕಕ್ಕೆ ಅಂಗೀಕಾರ ಪಡೆದರು.

**ಹಿಂದುಳಿ ಆಯೋಗ ಮಸೂದೆಗೂ ಒಪ್ಪಿಗೆ:** ಇದೇ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮೂಲಕ ರಾಜ್ಯದಲ್ಲಿ ಎಲ್ಲ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಲು ಹಾಗೂ ಅದಕ್ಕಾಗಿ 28.52 ಕೋಟಿ ರೂ. ಒದಗಿಸುವ 'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ)2014ಕ್ಕೂ ಅಂಗೀಕಾರ ದೊರೆಯಿತು.

ಕನ್ನಡಪ್ರಭ

ಉದ್ಯಮ ಆರಂಭಕ್ಕೆ ಅನಿವಾಸಿ ಭಾರತೀಯರಿಗೆ ಉತ್ತೇಜನ

First Published: 13 Jul 2014 02:00:00 AM IST

## ಎಲ್ಲ ಸೌಕರ್ಯ, ಸಹಾಯ ಒದಗಿಸಲು ಸಿದ್ಧ: ಸಚಿವ ರಾಮಲಿಂಗಾರೆಡ್ಡಿ

*ಬೆಂಗಳೂರಿನಲ್ಲಿ ಅಮೆರಿಕನ್ನಡೋತ್ಸವ, ಹೂಡಿಕೆದಾರರ ಸಮಾವೇಶ*

*ಬೆಂಗಳೂರು: ಉದ್ಯಮ ಆರಂಭಿಸಲು ಆಸಕ್ತಿ ತೋರುವ ಅನಿವಾಸಿ ಭಾರತೀಯರಿಗೆ ಉತ್ತೇಜನ ನೀಡಲಿದ್ದು ಅವರಿಗೆ ಅನುಕೂಲವಾಗುವಂತೆ ಸರ್ಕಾರ ಎಲ್ಲಾ ಸೌಕರ್ಯ ನೀಡಲು ಹಾಗೂ ಸಹಾಯ ಮಾಡಲು ಸಿದ್ಧ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.*

*ನಾವಿಕ ಮತ್ತು ರಾಜ್ಯ ಅನಿವಾಸಿ ಭಾರತೀಯ ಸಮಿತಿ ಸಹಭಾಗಿತ್ವದಲ್ಲಿ 'ಅಸೆಟ್ಸ್' ಅಮೆರಿಕನ್ನಡೋತ್ಸವ 2014 ಹಾಗೂ ಬಂಡವಾಳ ಹೂಡಿಕೆದಾರರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.*

*ದೇಶಾಭಿಮಾನದ ವಿಚಾರದಲ್ಲಿ ಅನಿವಾಸಿ ಭಾರತೀಯರು ಸದಾ ಮುಂದಿದ್ದು ಅದಕ್ಕೆ ಸಾಕ್ಷಿಯಾಗಿ ಅಕ್ಕ ಮತ್ತು ನಾವಿಕ ಸಂಸ್ಥೆಯ ಕಾರ್ಯ ಶ್ಲಾಘನೀಯ. ನಿರುದ್ಯೋಗ ಹೋಗಲಾಡಿಸುವ ನಿಟ್ಟಿನಲ್ಲಿ ಬಂಡವಾಳ ಹೂಡುವವರಿಗೆ ಅಗತ್ಯ ಸೌಲಭ್ಯ ಒದಗಿಸುವಲ್ಲಿ ಸರ್ಕಾರ ಸನ್ನದ್ಧವಾಗಿದೆ ಎಂದು ಅವರು ನುಡಿದರು. ನಂತರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಮಾತನಾಡಿ, ಅನಿವಾಸಿ ಭಾರತೀಯರೊಂದಿಗೆ ಸಂಬಂಧ ಕೇವಲ ಹಣಕಾಸಿಗಷ್ಟೇ ಸೀಮಿತವಾಗಬಾರದು. ಕನ್ನಡ ಕಟ್ಟುವ ಕೆಲಸಕ್ಕೆ ನಾವೆಲ್ಲರೂ ಒಂದಾಗಿ ಹೆಚ್ಚು ರೀತಿಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.*

*ಎರಡನೇ ಬಾರಿಗೆ; ಅಧ್ಯಕ್ಷ ಭಾಷಣ ಮಾಡಿದ ನಾವಿಕದ ಡಾ. ಶರಣಬಸವ ರಾಜೂರ, ಎರಡನೇ ಬಾರಿಗೆ ಭಾರತದಲ್ಲಿ ಅಮೆರಿಕನ್ನಡೋತ್ಸವ ಆಚರಿಸುತ್ತಿದ್ದು ಇದು ಬರೀ ಸಮ್ಮೇಳನಕ್ಕೆ ಮಾತ್ರ ಸೀಮಿತವಾಗದೇ ಭಾಷೆ, ಕಲೆ, ಸಂಸ್ಕೃತಿಯನ್ನು ಮಕ್ಕಳು ತಮ್ಮ ಜೀವನದ ಚಟುವಟಿಕೆಯಾಗಿ ಅಳವಡಿಸಿಕೊಳ್ಳುವಂತೆ ಮಾಡುವುದು ನಾವಿಕದ ಉದ್ದೇಶವಾಗಿದೆ ಎಂದರು.*

*ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕದ ಉಪಾಧ್ಯಕ್ಷರಾದ ವಿ. ಸಿ. ಪ್ರಕಾಶ್, ಕಾರ್ಯದರ್ಶಿ ಡಾ. ಮುರಳೀಧರ್, ಅನಿವಾಸಿ ಭಾರತೀಯರಾದ ವಲ್ಲೀಶ್ ಶಾಸ್ತ್ರಿ, ಮತ್ತಿತರರು ಭಾಗವಹಿಸಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಒತ್ತು ನೀಡಬೇಕಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀ ಗೈರಾಗಿದ್ದು ಇಲಾಖೆಯ ಬಗ್ಗೆ ಅವರಿಗಿರುವ ಕಾಳಜಿ ತೋರಿಸುತ್ತಿತ್ತು.*

*ಮುಂದಿನ ವರ್ಷ ಜಾಗತಿಕ ಹೂಡಿಕೆದಾರರ ಸಮಾವೇಶ*

*ಬಂಡವಾಳ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್, 2015ರಲ್ಲಿ ಜಾಗತಿಕ ಹೂಡಿಕೆದಾರರ (ಜಿಮ್) ಸಮಾವೇಶ ಆಯೋಜಿಸಲಿದ್ದು, ಹೂಡಿಕೆದಾರರಿಗೆ ಉತ್ತಮ ವಾತಾವರಣ ಕಲ್ಪಿಸುವುದು ಸರ್ಕಾರದ ಉದ್ದೇಶ ಎಂದರು. ಬಂಡವಾಳ ಹೂಡುವವರಿಗೆ ಅಧಿಕಾರಿಗಳಿಂದ ಸಮಸ್ಯೆ ಎದುರಾದರೆ ಸಕಾಲ ಯೋಜನೆ ನೆರವು ಪಡೆದುಕೊಳ್ಳಿ. ನಿರ್ದಿಷ್ಟ ಸಮಯದಲ್ಲಿ ತಮ್ಮ ಕೆಲಸ ಸಾಧಿಸಿಕೊಳ್ಳಲು ಇದರಿಂದ ಅನುಕೂಲವಾಗಲಿದೆ ಎಂದರು.*

SATURDAY, 19 JULY, 2014

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

## ಸೇವಾ ದಕ್ಷತೆ ವೃದ್ಧಿಗೆ ಸಕಾಲ ಸಹಕಾರಿ'



ಕೊಪ್ಪಳದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ಸಕಾಲ ಕಾಯ್ದೆ ಅನುಷ್ಠಾನ ಕುರಿತ ಕಾರ್ಯಾಗಾರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಸುರೇಶ್ ಇಟ್ನಾಳ್ ಉದ್ಘಾಟಿಸಿದರು

ಕೊಪ್ಪಳ: ಸರ್ಕಾರಿ ಸೇವೆಗಳನ್ನು ಸಕಾಲ ಕಾಯ್ದೆ ವ್ಯಾಪ್ತಿಯಲ್ಲಿ ಸೇರಿಸಿದ್ದರಿಂದ ನೌಕರರಲ್ಲಿನ ಸೇವಾ ದಕ್ಷತೆ ವೃದ್ಧಿಸಲು ಸಹಕಾರಿಯಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಸುರೇಶ್ ಇಟ್ನಾಳ್ ಅಭಿಪ್ರಾಯಪಟ್ಟರು.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಹಾಗೂ ಕೊಪ್ಪಳ ಜಿಲ್ಲಾ ತರಬೇತಿ ಸಂಸ್ಥೆಯ ಆಶ್ರಯದೊಂದಿಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಆಯೋಜಿಸಿರುವ ಸಕಾಲ ಕಾಯ್ದೆ ಅನುಷ್ಠಾನ ಕುರಿತ ಎರಡು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರದ ವಿವಿಧ ಸೇವೆಗಳನ್ನು ಕಾಲಮಿತಿಯಲ್ಲಿ ಒದಗಿಸುವುದು ಹಾಗೂ ಆಡಳಿತ ವ್ಯವಸ್ಥೆಯನ್ನು ಪಾರದರ್ಶಕಗೊಳಿಸುವ ಉದ್ದೇಶದಿಂದ ಸಕಾಲ ಅಧಿನಿಯಮ -2011 ಕಾಯ್ದೆ ಜಾರಿಗೊಳಿಸಲಾಗಿದೆ. ಸದ್ಯ ರಾಜ್ಯದ 50 ಇಲಾಖೆಗಳಲ್ಲಿ ಒಟ್ಟು 669 ಸೇವೆಗಳನ್ನು ಸಕಾಲದ ವ್ಯಾಪ್ತಿಗೆ ಸೇರಿಸಲಾಗಿದೆ. ಸಕಾಲ ಕಾಯ್ದೆ ಜಾರಿಗೊಂಡ ನಂತರ, ಅಧಿಕಾರಿ, ನೌಕರರಲ್ಲಿ ಸೇವಾ ದಕ್ಷತೆಯಲ್ಲಿ ವೃದ್ಧಿ ಕಂಡುಬಂದಿದೆ. ಆಡಳಿತ ವ್ಯವಸ್ಥೆಯಲ್ಲಿ ಚುರುಕುತನ ಮೂಡುತ್ತಿದೆ ಎಂದರು.

**ಅನುಷ್ಠಾನದಲ್ಲಿ ಹಿನ್ನಡೆ?**

ಕಳೆದ ತಿಂಗಳು ಸಕಾಲ ಅಧಿನಿಯಮ ಅನುಷ್ಠಾನದ ಅಡಿ ಅರ್ಜಿಗಳನ್ನು ವಿಲೇವಾರಿ ಮಾಡುವಲ್ಲಿ ಜಿಲ್ಲೆಯ ಕಂದಾಯ ಇಲಾಖೆ ಹಾಗೂ ಒಟ್ಟಾರೆ ಕೊಪ್ಪಳ ಜಿಲ್ಲೆ ಮೊದಲನೆ ಸ್ಥಾನದಲ್ಲಿತ್ತು. ಆದರೆ ಪ್ರಸಕ್ತ ತಿಂಗಳು ಕಂದಾಯ ಇಲಾಖೆ 4ನೇ ಸ್ಥಾನದಲ್ಲಿದ್ದರೆ, ಕೊಪ್ಪಳ ಜಿಲ್ಲೆ 7ನೇ ಸ್ಥಾನದಲ್ಲಿದೆ.

ಇಲಾಖೆಗಳು ತಮ್ಮ ಕಚೇರಿಗಳಲ್ಲಿ ಸಾರ್ವಜನಿಕರಿಂದ ಸ್ವೀಕರಿಸುವ ಅರ್ಜಿಗಳನ್ನು ಸಕಾಲ ಅಧಿನಿಯಮದ ಅಡಿ ಸ್ವೀಕರಿಸಬೇಕು. ಆದರೆ ಕೆಲವು ಇಲಾಖೆಗಳು ಅರ್ಜಿಗಳನ್ನು ಸಕಾಲ ವ್ಯಾಪ್ತಿಯ ಹೊರತಾಗಿ ಪಡೆಯುತ್ತಿರುವುದರಿಂದ, ಅರ್ಜಿ ಸ್ವೀಕೃತಿ ಹಾಗೂ ವಿಲೇವಾರಿ ಬಗ್ಗೆ ಸಮರ್ಪಕ ಮಾಹಿತಿ ದೊರೆಯುತ್ತಿಲ್ಲ.

ಜಿಲ್ಲೆಯಲ್ಲಿ ಆಯುಷ್, ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕನ್ನಡ ಮತ್ತು ಸಂಸ್ಕೃತಿ, ಅಗ್ನಿಶಾಮಕ, ಪರಿಸರ ಮಾಲಿನ್ಯ ನಿಯಂತ್ರಣ, ಯುವಜನ ಸೇವೆ ಮತ್ತು ಕ್ರೀಡಾ ಯುವಸಬಲೀಕರಣ, ಲೋಕೋಪಯೋಗಿ ಮುಂತಾದ ಇಲಾಖೆಗಳಲ್ಲಿ ಸಕಾಲ ಕಾಯ್ದೆ ಅನುಷ್ಠಾನ ತೃಪ್ತಿಕರವಾಗಿಲ್ಲ ಇನ್ನು ನಗರಸಭೆ, ಸ್ಥಳೀಯ ಸಂಸ್ಥೆಗಳು ಸಕಾಲ ಕಾಯ್ದೆಅಡಿ ಅರ್ಜಿಗಳನ್ನು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡುತ್ತಿಲ್ಲ. ಕಾಯ್ದೆ ಅನುಷ್ಠಾನದಲ್ಲಿ ನಿರ್ಲಕ್ಷ್ಯ ತೋರುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅವಕಾಶವಿದೆ ಎಂದು ಎಚ್ಚರಿಸಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ನಾಗರಾಜ ಜುಮ್ಮನ್ನವರ್ ಮಾತನಾಡಿ, ಸಕಾಲ ಕಾಯ್ದೆ ಜಾರಿಗೆ ತಂದಿರುವುದು ಸ್ವಾಗತಾರ್ಹವಾದರೂ, ಅದಕ್ಕೆ ತಕ್ಕಂತೆ ಸರ್ಕಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಬೇಕು. ಉತ್ತರ ಕರ್ನಾಟಕದಲ್ಲಿ ಶೇ 40 ರಷ್ಟು ಹುದ್ದೆಗಳು ಖಾಲಿ ಇವೆ ಎಂದರು.

ಸಾಮಾಜಿಕ ಭದ್ರತಾ ಯೋಜನೆಯ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ ದೇಸಾಯಿ ಸಕಾಲ ಕಾಯ್ದೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಬಸವರಾಜ್, ಉಪ ಪ್ರಾಚಾರ್ಯ ಪ್ರಾಣೇಶ್ ಉಪಸ್ಥಿತರಿದ್ದರು

ವಿಜಯ ಕರ್ನಾಟಕ

# ‘ಸಕಾಲ ಪ್ರತಿಯೊಬ್ಬರಿಗೂ ಸಹಕಾರಿ’

ವಿಕ ಸುದ್ದಿಲೋಕ | Jul 18, 2014, 04.18AM IST

**ಕೊಪ್ಪಳ**; ಸಾರ್ವಜನಿಕರಿಗೆ ಒದಗಿಸಲಾಗುವ ನಾನಾ ಸರಕಾರಿ ಸೇವೆಗಳನ್ನು ಸಕಾಲ ಕಾಯಿದೆ ವ್ಯಾಪ್ತಿಯಲ್ಲಿ ಸೇರಿಸಿದ್ದು, ಇದರಿಂದ ಸರಕಾರಿ ನೌಕರರಲ್ಲಿನ ಸೇವಾ ದಕ್ಷತೆ ವರ್ಧಿಸಲು ಸಹಕಾರಿಯಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಸುರೇಶ್ ಇಟ್ನಾಳ್ ಗುರುವಾರ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ತರಬೇತಿ ಸಂಸ್ಥೆಯ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಯೋಜಿಸಿರುವ ಎರಡು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸರಕಾರದ ನಾನಾ ಇಲಾಖೆಗಳಿಂದ ಸಾರ್ವಜನಿಕರಿಗೆ ಒದಗಿಸಲಾಗುವ ಸೇವೆ ಕಾಲಮಿತಿಯಲ್ಲಿ ಒದಗಿಸುವುದು ಹಾಗೂ ಆಡಳಿತ ವ್ಯವಸ್ಥೆ ಪಾರದರ್ಶಕಗೊಳಿಸುವ ಉದ್ದೇಶದಿಂದ ಸಕಾಲ ಅಧಿನಿಯಮ-2011 ಕಾಯಿದೆ ಜಾರಿಗೊಳಿಸಲಾಗಿದೆ. ಸದ್ಯ ರಾಜ್ಯದ 50 ಇಲಾಖೆಗಳಲ್ಲಿ ಒಟ್ಟು 669 ಸೇವೆ ಸಕಾಲದ ವ್ಯಾಪ್ತಿಗೆ ಸೇರಿಸಲಾಗಿದೆ. ಸಕಾಲ ಕಾಯಿದೆ ಜಾರಿಗೊಂಡ ನಂತರ, ಅಧಿಕಾರಿ, ನೌಕರರಲ್ಲಿ ಸೇವಾ ದಕ್ಷತೆ ವರ್ಧಿ ಕಂಡುಬಂದಿದ್ದು, ಆಡಳಿತ ವ್ಯವಸ್ಥೆ ಚುರುಕುತನ ಮೂಡುತ್ತಿದೆ ಎಂದರು.

ಸರಕಾರಿ ನೌಕರ ಸಂಘದ ಜಿಲ್ಲಾ ಅಧ್ಯಕ್ಷ ನಾಗರಾಜ ಜುಮ್ಮನ್ನವರ್ ಮಾತನಾಡಿ, ಸರಕಾರ ಸಾರ್ವಜನಿಕರ ಅನುಕೂಲಕ್ಕಾಗಿ ಸಕಾಲ ಕಾಯಿದೆ ಜಾರಿಗೆ ತಂದಿರುವುದು ಸ್ವಾಗತಾರ್ಹ. ಆದರೆ, ಅದಕ್ಕೆ ತಕ್ಕಂತೆ ಸರಕಾರ ಖಾಲಿ ಹುದ್ದೆ ಭರ್ತಿ ಮಾಡಲು ಮುಂದಾಗಬೇಕು. ಉತ್ತರ ಕರ್ನಾಟಕದಲ್ಲಿ ಶೇ.40 ರಷ್ಟು ಹುದ್ದೆ ಖಾಲಿ ಇವೆ ಎಂದರು.

ಸಾಮಾಜಿಕ ಭದ್ರತಾ ಯೋಜನೆಯ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ ದೇಸಾಯಿ ಸಕಾಲ ಕಾಯಿದೆ ಕುರಿತು ಉಪನ್ಯಾಸ ನೀಡಿದರು. ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಬಸವರಾಜ್, ಉಪ ಪ್ರಾಚಾರ್ಯ ಪ್ರಾಣೇಶ್ ಸೇರಿದಂತೆ ನಾನಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದರು.

ವಿಜಯ ಕರ್ನಾಟಕ

# ಸಕಾಲ ಮೂಲಕ ಬೆಳೆ ನಷ್ಟ ಪರಿಹಾರ ವಿತರಣೆ

Jul 24, 2014, 03.17AM IST

**ಬೆಂಗಳೂರು** : ಸಕಾಲ ಮೂಲಕ ರೈತರಿಗೆ ಬೆಳೆ ನಷ್ಟ ಪರಿಹಾರ ವಿತರಣೆಗೆ ಚಿಂತನೆ ನಡೆದಿದೆ ಎಂದು ಅರಣ್ಯ ಸಚಿವ ಬಿ.ರಮಾನಾಥ ರೈ ಮೇಲ್ಮನೆಗೆ ಬುಧವಾರ ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಅಶ್ವತ್ಥನಾರಾಯಣ ಪ್ರಶ್ನೆಗೆ ಉತ್ತರಿಸಿ ''ವನ್ಯಜೀವಿಗಳ ಹಾವಳಿಗೆ ಒಳಗಾದ ಪ್ರಕರಣಗಳಲ್ಲಿ ಬೆಳೆ ನಷ್ಟಕ್ಕೆ ಮಾರ್ಗಸೂಚಿ ಆಧರಿಸಿ ಪರಿಹಾರ ವಿತರಿಸಲಾಗುತ್ತಿದ್ದು, ರೈತರ ಕೈಸೇರುವಲ್ಲಿ ವಿಳಂಬವಾಗುತ್ತಿರುವ ಕುರಿತು ದೂರು ಇದೆ. ಪ್ರಾಣ ಹಾನಿ ಪ್ರಕರಣಗಳಲ್ಲೂ ಇಂಥದ್ದೇ ಸಮಸ್ಯೆ ಇದ್ದು, ತೊಂದರೆಗೆ ಒಳಗಾದವರಿಗೆ ತ್ವರಿತವಾಗಿ ಪರಿಹಾರ ವಿತರಿಸಲು ಸಕಾಲ ಯೋಜನೆ ವ್ಯಾಪ್ತಿಗೆ ತರಲು ಪ್ರಯತ್ನ ಸಾಗಿದೆ,'' ಎಂದರು.

''ಕಾಡುಪ್ರಾಣಿಗಳ ಹಾವಳಿಯಿಂದ ಒಂದು ವರ್ಷದಲ್ಲಿ ಸರಾಸರಿ ಹತ್ತು ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ಬೆಳೆ ಹಾನಿ ಪ್ರಕರಣಗಳಲ್ಲಿ ಗರಿಷ್ಠ ಪರಿಹಾರವನ್ನು 50 ಸಾವಿರ ರೂ. ನಿಂದ 70 ಸಾವಿರ ರೂ.ಗೆ ಹೆಚ್ಚಿಸುವ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ,'' ಎಂದು ಸಚಿವರು ಸ್ಪಷ್ಟಪಡಿಸಿದರು.

ಪಿಂಚಣಿ ವಿತರಣೆಗೆ ವಾಕಿಂಗ್ ಎಟಿಎಂ

''ಸಾಮಾಜಿಕ ಭದ್ರತೆ ಯೋಜನೆ ಅಡಿ ನೀಡುವ ನಾನಾ ಪಿಂಚಣಿ ಸೌಲಭ್ಯವನ್ನು ಫಲಾನುಭವಿಯ ಮನೆ ಬಾಗಿಲಿಗೆ ತಲುಪಿಸಲು ವಾಕಿಂಗ್ ಎಟಿಎಂ ಎಂಬ ಹೊಸ ಮಾದರಿಯ ವ್ಯವಸ್ಥೆ ಜಾರಿಗೆ ತರಲು ಚಿಂತನೆ ನಡೆದಿದೆ,'' ಎಂದು ಅರಣ್ಯ ಸಚಿವ ಬಿ.ರಮಾನಾಥ ರೈ ಮೇಲ್ಮನೆಗೆ ಬುಧವಾರ ತಿಳಿಸಿದ್ದಾರೆ.

''ಎನ್‌ಇಎಫ್‌ಟಿ ಮೂಲಕ ಸ್ಮಾರ್ಟ್ ಕಾರ್ಡ್ ನೀಡಿ ಚಾಮರಾಜನಗರ, ಮಂಡ್ಯ ಸಹಿತ ಐದು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತಂದಿದ್ದು, ಯಶಸ್ವಿ ಆದ್ದಲ್ಲಿ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು,'' ಎಂದು ಕಾಂಗ್ರೆಸ್‌ನ ಜಯಮ್ಮ ಬಾಲರಾಜ್ ಪ್ರಶ್ನೆಗೆ ಮೇಲ್ಮನೆಯಲ್ಲಿ ಸಚಿವರು ಉತ್ತರಿಸಿದರು.

''ಪ್ರಸ್ತುತ 41 ಲಕ್ಷ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ನೀಡಿದ್ದು, ಹೊಸದಾಗಿ ಅರ್ಜಿ ಸಲ್ಲಿಸಿದವರ ದಾಖಲೆಯನ್ನು ಪರಾಮರ್ಶಿಸಿ ಸೌಲಭ್ಯ ನೀಡಲಾಗುವುದು. ಮಾಸಾಶನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ತಿಂಗಳ 5ರಂದು, ಅಂಚೆ ಕಚೇರಿಯ ಉಳಿತಾಯ ಖಾತೆಗೆ ತಿಂಗಳ 2ನೇ ತಾರೀಕಿಗೆ ಜಿಪಿಒಗೆ ರವಾನಿಸಿ ಅಲ್ಲಿಂದ ಫಲಾನುಭವಿಗಳಿಗೆ ತಲುಪಲು ಹತ್ತು ದಿನ ಅಗತ್ಯವಿದೆ. ತ್ವರಿತವಾಗಿ ಪಿಂಚಣಿ ವಿತರಿಸಲು ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತಿದೆ,'' ಎಂದು ಸಚಿವರು ಸ್ಪಷ್ಟಪಡಿಸಿದರು.

ವಿಜಯ ಕರ್ನಾಟಕ

# ಸಕಾಲ ವ್ಯಾಪ್ತಿಗೆ ಸಚಿವಾಲಯ ಸೇರ್ಪಡೆ: ಟಿಬಿಜೆ

Jul 23, 2014, 03.27AM IST

**ಬೆಂಗಳೂರು:** ಸಕಾಲ ವ್ಯಾಪ್ತಿಗೆ ಸಚಿವಾಲಯವನ್ನೂ ಸೇರಿಸಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಜಿ.ಜಯಚಂದ್ರ ವಿಧಾನಪರಿಷತ್‌ಗೆ ಮಂಗಳವಾರ ತಿಳಿಸಿದರು.

ಅವರು ಕರ್ನಾಟಕ ಸಕಾಲ ಸೇವೆಗಳ ತಿದ್ದುಪಡಿ ವಿಧೇಯಕ ಮಂಡನೆ ನಂತರ ಸದಸ್ಯರು ಎತ್ತಿದ ಆಕ್ಷೇಪಗಳಿಗೆ ಉತ್ತರಿಸುತ್ತಾ, "ಸಚಿವಾಲಯವನ್ನೂ ಸಕಾಲ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನ ಈಗಾಗಲೇ ಆರಂಭವಾಗಿದೆ. ಅದಕ್ಕೆ ಕಾಲಮಿತಿ ಹೇರಲಾಗದು. ಎಲ್ಲ ಸಚಿವಾಲಯಗಳಲ್ಲಿ ಬಾಕಿ ಇರುವ ಕಡತಗಳ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಪರಿಶೀಲಿಸಲಾಗುತ್ತಿದೆ. ಯಾವ ಸಚಿವಾಲಯದಲ್ಲಿ ಶೇ.50ಕ್ಕಿಂತ ಹೆಚ್ಚು ಕಡತಗಳು ಬಾಕಿ ಇದ್ದವೋ ಅಂತಹ ಸಚಿವಾಲಯಗಳಿಗೆ ನೋಟಿಸ್ ನೀಡಲಾಗಿತ್ತು. ಇದೀಗ ಆ ಸಚಿವಾಲಯಗಳೂ ಸಹ ಚುರುಕುಗೊಂಡಿವೆ," ಎಂದರು.

"ರಾಜ್ಯದಲ್ಲಿ ಸಕಾಲ ಸೇವೆ ಆರಂಭಿಸಿ ಎರಡು ವರ್ಷಗಳಾಗಿದ್ದು, ಈ ಅವಧಿಯಲ್ಲಿ 5.24ಕೋಟಿ ಅರ್ಜಿಗಳು ಬಂದಿದ್ದವು.ಅವುಗಳಲ್ಲಿ 5.15ಕೋಟಿ ವಿಲೇವಾರಿ ಮಾಡಲಾಗಿದೆ. ಶೇ 98ರಷ್ಟು ಪ್ರಗತಿ ಸಾಧಿಸಲಾಗಿದೆ. ಜನ ಸಾಮಾನ್ಯರಿಗೆ ಉಪಯುಕ್ತವಾದ 2ಸಾವಿರ ಸೇವೆಗಳಲ್ಲಿದ್ದು, ಆದರಲ್ಲಿ ಸದ್ಯ 669 ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದೆ. ಸಕಾಲದಲ್ಲಿ ಸೇವೆ ಒದಗಿಸದ ಕಾರಣಕ್ಕೆ 459ಮಂದಿಗೆ 45ಲಕ್ಷ ರೂ. ದಂಡ ನೀಡಲಾಗಿದೆ. ಅಧಿಕಾರಿಗಳ ವೇತನದಲ್ಲಿ ಆ ಹಣ ಕಡಿತ ಮಾಡಲಾಗುವುದು,"ಎಂದು ಅವರು ಹೇಳಿದರು.

ವಿ.ಎಸ್.ಉಗ್ರಪ್ಪ, ಮೋಟಮ್ಮ, ನಾರಾಯಣಸ್ವಾಮಿ ಸೇರಿದಂತೆ ಹಲವು ಸದಸ್ಯರು ದಂಡದ ಮೊತ್ತವನ್ನು ಹೆಚ್ಚಳ ಮಾಡುವಂತೆ ಸರಕಾರವನ್ನು ಆಗ್ರಹಿಸಿದರು. ಚರ್ಚೆಯ ನಂತರ ವಿಧೇಯಕಕ್ಕೆ ಸದನ ಅನುಮೋದನೆ ನೀಡಿತು

ಮುಖಪುಟ >> ಜಿಲ್ಲೆ >> **ದಾವಣಗೆರೆ**

ಕನ್ನಡಪ್ರಭ

# ಅರಣ್ಯ ಇಲಾಖೆಗೂ ಬಂತು ಸಕಾಲ

First Published: 17 Jul 2014 02:00:00 AM IST

ಕಾರವಾರ: ಅರಣ್ಯ ಇಲಾಖೆಯನ್ನು ಸಕಾಲ ವ್ಯಾಪ್ತಿಗೆ ಒಳಪಡಿಸಿದ್ದು, ಆರು ಸೇವೆಗಳನ್ನು ಸೇರಿಸಲಾಗಿದೆ. ಇನ್ನು ಇಲಾಖೆಯಲ್ಲಿ ಮಾಹಿತಿ ಹೇಳಲು ಸಾಧ್ಯವಿಲ್ಲ ಎಂಬ ಸಬೂಬನ್ನು ಹೇಳುವಂತಿಲ್ಲ.

ವಿವಿಧ ಸೇವೆಗಳಿಗಾಗಿ ಇನ್ನು ಸಾರ್ವಜನಿಕರು ಅರಣ್ಯ ಇಲಾಖೆಗೆ ಅಲೆಯಬೇಕಿಲ್ಲ. ಸಸಿ ಬೇಕಾದರೆ, ವನ್ಯ ಪ್ರಾಣಿಗಳ ಹಾವಳಿಯಿಂದ ಬೆಳೆ ನಾಶವಾಗಿದ್ದರೆ, ಮಾನವ ಪ್ರಾಣ ಹಾನಿ ಅಥವಾ ಸಾಕು ಪ್ರಾಣಿಗಳ ಪ್ರಾಣ ಹಾನಿಯಾಗಿದ್ದರೆ ಸಕಾಲದಡಿ ಅರ್ಜಿ ಸಲ್ಲಿಸಿ ನಿಗದಿತ ಅವಧಿಯೊಳಗೆ ಪರಿಹಾರ, ಸೇವೆ ಅಥವಾ ಸೂಕ್ತ ಮಾಹಿತಿ ಪಡೆಯಬಹುದು.

ಸೇವೆಗಳು ಹಾಗೂ ಸಮಯ: ಸಾರ್ವಜನಿಕರಿಗೆ ಸಸಿಗಳ ವಿತರಣೆ ಹಾಗೂ ಆದೇಶ ನೀಡುವುದು (ಉತ್ತರಿಸಲು ನಿಗದಿತ ಅವಧಿ 7 ಕೆಲಸದ ದಿನಗಳು), ವನ್ಯಪ್ರಾಣಿ ಹಾವಳಿಯಿಂದ ಬೆಳೆನಾಶ ಪರಿಹಾರದ ಆದೇಶ ನೀಡುವುದು (ವಲಯ ಅರಣ್ಯ ಅಧಿಕಾರಿ, 30 ಕೆಲಸದ ದಿನಗಳು), ವನ್ಯಪ್ರಾಣಿ ಹಾವಳಿಯಿಂದ ಸಾಕುಪ್ರಾಣಿಯ ಪ್ರಾಣ ಹಾನಿ ಬಗ್ಗೆ ಪರಿಹಾರಕ್ಕೆ ಆದೇಶಿಸುವುದು (15 ಕೆಲಸದ ದಿನಗಳು), ವನ್ಯಪ್ರಾಣಿ ಹಾವಳಿಯಿಂದ ಮಾನವನ ಪ್ರಾಣ ಹಾನಿ ಹಾಗೂ ಶಾಶ್ವತ ಅಂಗವಿಕಲತೆ ಬಗ್ಗೆ ಪರಿಹಾರಕ್ಕೆ ಆದೇಶಿಸುವುದು (15 ಕೆಲಸದ ದಿನಗಳು), ಮರಗಳ ಕಟಾವು ಮಾಡಲು ಆದೇಶಿಸುವುದು (90 ಕೆಲಸದ ದಿನಗಳು), ಕಟಾವು ಮಾಡಿದ ಮರಗಳ ಸಾಗಣೆಗೆ ಪರವಾನಗಿ ನೀಡುವುದನ್ನು (42 ಕೆಲಸದ ದಿನಗಳು) ಸದ್ಯಕ್ಕೆ ಸಕಾಲದ ವ್ಯಾಪ್ತಿಗೆ ಸೇರಿಸಲಾಗಿದೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಸಕ್ಷಮ ಅಧಿಕಾರಿಗಳೆಂದು ಗೊತ್ತುಪಡಿಸಲಾಗಿದೆ. ಸಕ್ಷಮ ಅಧಿಕಾರಿ ಅರ್ಜಿಯನ್ನು ವಿಲೇವಾರಿ ಮಾಡುವುದಕ್ಕೂ ಸಮಯ ಮಿತಿಯನ್ನೂ ಹಾಕಲಾಗಿದೆ. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರನ್ನು ಮೇಲ್ಮನವಿ ಪ್ರಾಧಿಕಾರ ಅಧಿಕಾರಿ ಎಂದು ನಿಗದಿಪಡಿಸಲಾಗಿದೆ. ಮೇಲ್ಮನವಿಯನ್ನು ವಿಲೇವಾರಿ ಮಾಡುವುದಕ್ಕೂ ಸಮಯ ಮಿತಿಯನ್ನು ಹಾಕಲಾಗಿದೆ.

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ – 2011

## ನಿಮ್ಮ ಆರೋಗ್ಯಕರ ಬದುಕಿಗೆ
## ನಮ್ಮ ಸುರಕ್ಷಿತ ಸೇವೆಗಳು



## ಆರೋಗ್ಯ
## ಮತ್ತು ಕುಟುಂಬ ಕಲ್ಯಾಣ ಇಲಾಖೆ

| ಕ್ರ.ಸಂ. | ಇಲಾಖೆಯ ಮುಖ್ಯ ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತುಮಾಡಿದ ಕಾಲ (ಕೆಲಸದ ದಿನಗಳು) |
|---|---|---|---|
| 1 | ಅಶಕ್ತ ಪ್ರಮಾಣ ಪತ್ರ | ತಾಲ್ಲೂಕು ವೈದ್ಯಕೀಯ ಮಂಡಳಿ | 30 |
| 2 | ಗಾಯದ ಪ್ರಮಾಣ ಪತ್ರ | ವೈದ್ಯಾಧಿಕಾರಿ | 03 |
| 3 | ಬಿಡುಗಡೆ/ಸಂತಾನ ಹರಣ ಶಸ್ತ್ರಚಿಕಿತ್ಸೆಯ ಪ್ರಮಾಣ ಪತ್ರ | ವೈದ್ಯಾಧಿಕಾರಿ | 01 |
| 4 | ವಯೋ ಪ್ರಮಾಣ ಪತ್ರ | ವೈದ್ಯಾಧಿಕಾರಿ | 03 |
| 5 | ಫಾರ್ಮಾಸಿಸ್ಟ್ ಲೈಸನ್ಸ್ ನೀಡುವುದು | ಸಹಾಯಕ ಔಷಧಗಳ ನಿಯಂತ್ರಕರು | 30 |
| 6 | ಫಾರ್ಮಾಸಿಸ್ಟ್ ಲೈಸನ್ಸ್ ನವೀಕರಿಸುವುದು | ಸಹಾಯಕ ಔಷಧಗಳ ನಿಯಂತ್ರಕರು | 30 |

ಇಂದು... ನಾಳೆ... ಇನ್ನಿಲ್ಲ- ಹೇಳಿದ ಸಮಯ (ದಿನ) ತಪ್ಪೊಲ್ಲ

ಮಾಹಿತಿಗೆ ಹಾಗೂ ದೂರುಗಳಿಗೆ ಸಂಪರ್ಕಿಸಿ:

**ಸಕಾಲಕ್ಕೆ ಸೇವೆ ನೀಡದಿದ್ದರೆ !!**
ಸರ್ಕಾರಿ ನೌಕರರು ನಾಗರಿಕರಿಗೆ ರೂ.20/- ರಿಂದ ರೂ.500/-ಗಳವರೆಗೆ ಪರಿಹಾರ ಶುಲ್ಕವನ್ನು ತನ್ನ ಸಂಬಳದಿಂದ ಭರಿಸುವುದು

080 44554455
sakala@nic.in
www.sakala.kar.nic.in

"15 ಸಂಖ್ಯೆಯುಳ್ಳ ಸ್ವೀಕೃತಿ ರಸೀದಿಯನ್ನು ಕೇಳಿ ಪಡೆಯುವುದು, ಅದು ನಿಮ್ಮ ಹಕ್ಕು"

## 2014 ಆಗಸ್ಟ್

| ಭಾ | ಸೋ | ಮಂ | ಬ | ಗು | ಶು | ಶ | ಭಾ | ಸೋ | ಮಂ | ಬ | ಗು | ಶು | ಶ | ಭಾ | ಸೋ | ಮಂ | ಬ | ಗು | ಶು | ಶ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | | | | | | |

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು